

ಕ.ಪ. 176

ಶ್ರೀ. ಚೆನ್ನಿಂಬಾಳ ಶಂಕರ ನಾರಾಯಣ ರಾವ್

ವಿಜ್ಞಾನ ಪ್ರಸಾರಂ

ರಿ. ಗೋಪಾಲಕೃಷ್ಣ

೨೮.೧೧.೬೦.

ಕುಮಾರ ಕೃಪೆ

(ಗೀತಗಳ ಸಂಕಲನ)

ಗೋ. ಕೃ.

ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ
ಕೃಷ್ಣಮೂರ್ತಿಪುರಂ, ಮೈಸೂರು

ಮೊದಲನೆಯ ಮುದ್ರಣ ೧೯೫೯

ಬೆಲೆ : ೧ ರೂ. ೫೦ ನ.ಪೈ.

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು ೨
೧೯೫೯

ಅರ್ಪಣೆ

ರೆಕ್ಕೆಪುಕ್ಕಗಳೆಲ್ಲ ಬಲಿವನಕ ಪೋಷಿಸುತ
ಸ್ವೇಚ್ಛೆಯಲಿ ಬಾನಿನಲಿ ಹಾರುತಿರೆ ಮರಿಗಳ್
ಕಂಡೊಂದು ತೃಪ್ತಿಯಲಿ ಬಯಕೆ ತೀರಿದವೋಲು
ಮೆಲ್ಲನೆಲ್ಲಿಗೊ ಸರಿವ ಖಗಮಾತೆಯಂತೆ
ಮರೆಯಾದಿರೆಂದರಿವೆ ಎನ್ನ ನಡೆಸಿದ ಗುರುವೆ
ನಿಮ್ಮನೆಂತಾಂ ಮರೆವೆ; ನೀವಿತ್ತ ವರವೇ
ಬಲವಾಗೆ ನೆನೆ ನೆನೆದು ಕೃತಿಯನಿದನರ್ಪಿಸುವೆ
ಸಿರಿ ವೆಂಕಣಾರ್ಯ ಗುರುವೇ

ವಿಷಯಾನುಕ್ರಮಣಿಕೆ

ಪ್ರಕಾಶಕರ ನುಡಿ

ಮೂವತ್ತು ಮೂವತ್ತೈದು ವರ್ಷಗಳ ಹಿಂದಿನ ಮಾತು. ಆಗ ನಾವಿನ್ನೂ ಹೈಸ್ಕೂಲಿನ ವಿದ್ಯಾರ್ಥಿಗಳು. ಬೆಂಗಳೂರಿನಲ್ಲಿದ್ದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಓದುತ್ತಿದ್ದೆವು. ಶ್ರೀ ಕೆ. ಗೋಪಾಲ ಕೃಷ್ಣರಾಯರು ಎಂಟ್ರೆನ್ಸ್ ತರಗತಿಯಲ್ಲಿದ್ದರು. ಬಸವನಗುಡಿಯಲ್ಲಿ ನಾವು ಒಂದು ಸಾಹಿತ್ಯ ಸಂಘವನ್ನು ಏರ್ಪಡಿಸಿ ಅಲ್ಲಿ ಕಾವ್ಯವಾಚನ, ಉಪನ್ಯಾಸ, ಚರ್ಚೆಗಳನ್ನು ನಡೆಸುತ್ತಿದ್ದೆವು. ಆಗ ನಮಗೆ ಮುಂದಾಳು ನಮ್ಮ 'ಗೋಪಾಲ್'. (ಗೋಪಾಲಕೃಷ್ಣರಾಯರನ್ನು ನಾವು 'ಗೋಪಾಲ್' ಎಂದೇ ಕರೆಯುತ್ತಿದ್ದೆವು. ಈಗಲೂ ಅವರು ನಮಗೆ ಗೋಪಾಲೇ. ಅದೇ ಹಿಂದಿನ ಸ್ನೇಹಸೌಹಾರ್ದಗಳು ಅವರಲ್ಲಿನ್ನೂ ಮೂರ್ತಿಮತ್ತಾಗಿವೆ.) ಅವರು ಇಂಗ್ಲೀಷಿನಲ್ಲಿ ಕವಿತೆಗಳನ್ನು ಬರೆಯ ತೊಡಗಿದ್ದರು. ಅವುಗಳಲ್ಲಿ ಕೆಲವನ್ನು ನನ್ನ ಅಣ್ಣಂದಿರಾದ ದಿವಂಗತ ಶ್ರೀ ಟಿ. ಎಸ್. ವೆಂಕಣ್ಣಯ್ಯನವರಿಗೆ ಓದಿ ತೋರಿಸಿದೆ. ಅವರು "ಕವನ ಗಳು ಚೆನ್ನಾಗಿವೆ, ಕನ್ನಡದಲ್ಲಿ ಬರೆಯಲಿ" ಎಂದು ಹೇಳಿದರು. ಅದನ್ನು ಗೋಪಾಲಗೆ ತಿಳಿಸಿದೆ. ಕನ್ನಡದಲ್ಲಿ ಗೋಪಾಲ್ ಬರೆಯಲು ತೊಡಗಿದಾಗ ನಮ್ಮ ಸಂತೋಷಕ್ಕಂತೂ ಪಾರವಿಲ್ಲ. ಅವರು ಬರೆದು ಬರೆದಂತೆ ಅವುಗಳನ್ನು ನಮ್ಮ ಅಣ್ಣನವರಿಗೆ ತೋರಿಸುತ್ತಿದ್ದೆ. ಅವರು ಓದಿಸಿ ಕೇಳಿ ತಲೆದೂಗುತ್ತಿದ್ದರು. ಗೋಪಾಲ್ ಬರೆದ "ಕಮಲೆಯ ಹುಚ್ಚು" ಎಂಬ ಕವಿತೆಯು ನನಗೆ ಬಹಳ ಮೆಚ್ಚಿಗೆಯಾಗಿತ್ತು. ಅದು ಆಗ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ "ಸುವಾಸಿನಿ" ಎಂಬ ಮಾಸಪತ್ರಿಕೆಯಲ್ಲಿ "ವೆಂಕಟೇಶ" ಎಂಬ ಕಾವ್ಯನಾಮದಿಂದ ಪ್ರಕಟವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಥಮತಃ ವಿದ್ಯಾರ್ಥಿ ಕವಿ ಸಮ್ಮೇಳನ ನಡೆದಾಗ ಗೋಪಾಲ್ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿ

ದ್ದರು. ಅವರೇ ಅಲ್ಲಿನ ಕರ್ಣಾಟಕ ಸಂಘದ ಕಾರ್ಯದರ್ಶಿಗಳು. ಸಮ್ಮೇಳನದಲ್ಲಿ ಅವರು "ಅನಾಥೆ" ಎಂಬ ಕವಿತೆಯನ್ನು ಓದಿದರು. ಅದೂ ಎಲ್ಲರನ್ನೂ ಮುಗ್ಧಗೊಳಿಸಿತು. ಅದಕ್ಕೆ ಬಹುಮಾನವೂ ದೊರಕಿತು. ಅವರ "ಬಂಗಾರದ ಡಾಬು" ಎಂಬ ಸಣ್ಣಕತೆಗೆ "ಮುದ್ರಣ" ಬಹುಮಾನ ದೊರೆಯಿತು. ಪ್ರಬುದ್ಧ ಕರ್ಣಾಟಕ, ಜಯ ಕರ್ಣಾಟಕ, ಕಥಾಂಜಲಿ, ರಂಗಭೂಮಿ ಮೊದಲಾದ ಶ್ರೇಷ್ಠ ಸಾಹಿತ್ಯ ಪತ್ರಿಕೆಗಳಲ್ಲಿ ಅವರ ಕವನ, ಸಣ್ಣ ಕತೆ, ನಾಟಕಗಳು ಬರತೊಡಗಿದವು. ಅವರು ಬರೆದ ಏಕಾಂಕನಾಟಕಗಳನ್ನು ಶಾಲಾಮಹೋತ್ಸವಗಳಲ್ಲಿ ಅಭಿನಯಿಸತೊಡಗಿದರು. "ಅಪರಾಧಿ" ಎಂಬ ನಾಟಕವನ್ನು ಹುಬ್ಬಳ್ಳಿ ಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅಭಿನಯಿಸಿದರು. ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಅ. ನ. ಕೃಷ್ಣರಾಯರೇ ಅದರಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದರು. ಶ್ರೀ ಗೋಪಾಲಕೃಷ್ಣರಾಯರ ನಾಟಕ ಗಳೂ ಎಲ್ಲರಿಂದ ಮೆಚ್ಚಿಗೆ ಪಡೆದವು.

ಶ್ರೀ ಗೋಪಾಲಕೃಷ್ಣರಾಯರ ಸಣ್ಣಕತೆಗಳ ಸಂಕಲನಗಳೂ ಒಂದಾಗುತಲೊಂದು ಪ್ರಕಟವಾಗತೊಡಗಿದವು. ಉಡುಗೊರೆ, ನಟಿ, ಬಂಗಾರದ ಡಾಬು ಹೊರಬಿದ್ದವು. ಆಯ್ದ ಹತ್ತು ಕತೆಗಳು ಎಂಬ ಅವರ ಸಂಕಲನವೊಂದನ್ನು ನಾವೇ ನಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಿದ್ದೇವೆ.

ಮೈಸೂರಿನಲ್ಲಿ ೧೯೩೦ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಂಗವಾದ ಲೇಖಕರ ಗೋಷ್ಠಿಯಲ್ಲಿ ಶ್ರೀ ಗೋಪಾಲಕೃಷ್ಣರಾಯರು ತಮ್ಮ ಒಂದು ಕವನವನ್ನು ಓದಿ ಇನ್ನು ಮುಂದೆ ಕವಿತೆಗಳನ್ನು ಬರೆಯುವುದಿಲ್ಲವೆಂದು ತಾವು ಮಾಡಿರುವ ಪ್ರತಿಜ್ಞೆಯನ್ನು ತಿಳಿಸಿದರು. ನಾನಂತೂ ಅವರಿಗೆ "ಈ ನೋಂಪಿ ನೀನು ತೊಡುವುದು ತರವಲ್ಲ. ಒಂದಲ್ಲ ಒಂದು ದಿನ ನೀನು ಕೈಕೊಂಡ ವ್ರತ ಭಂಗವಾಗಿ ಕವಿತೆಗಳನ್ನು ಬರೆದೇ ಬರೆಯುವೆ" ಎಂದು ಹೇಳಿದ್ದೆ. ಹಾಗೆಯೇ ಆಯಿತು. ಅವರು ಮೈಸೂರಿನ ಮುಖ್ಯಮಂತ್ರಿಗಳ ಕಚೇರಿಯ ಮ್ಯಾನೇಜರಾದರು. ಆ ಸ್ಥಳದಲ್ಲಿ ಅವರಿಗೆ ಒಂದು ನಿಮಿಷವೂ ವಿರಾಮ ದೊರಕುವಂತಿರಲಿಲ್ಲ.

ಇನ್ನು ಅವರು ಬರವಣಿಗೆಗೆ ತಿಲಾಂಜಲಿ ಕೊಟ್ಟಹಾಗೆಯೇ ಎಂದು ನಾವು ಭಾವಿಸಿದೆವು. ಆದರೆ ಹಾಗಾಗಲಿಲ್ಲ. ಅವರು ಮೈಸೂರಿಗೆ ಬರುತ್ತಿದ್ದಾಗ ಅವರನ್ನು ಕಾಣಲು ನಾವು 'ಜಲದರ್ಶಿನಿ'ಗೆ ಹೋಗಿ ಬರುತ್ತಿದ್ದೆವು. ಅಲ್ಲಿ ಅವರು ಕೆಲಸದ ನಡುವೆ ಯೋಗಕ್ಷೇಮ ವಿಚಾರಿಸಿ ಏನೋ ಎರಡು ಮಾತನಾಡಿ ನಮ್ಮನ್ನು ಕಳುಹಿಸಿಕೊಟ್ಟುಬಿಡುತ್ತಿದ್ದರು. ಅವರ ಬಿಡುವಿಲ್ಲದ ಕೆಲಸವನ್ನು ನೋಡಿ "ಅಯ್ಯೋ ಪ್ರಾಣಿ!" ಎಂದು ನಮಗೆ ಅನ್ನಿಸುತ್ತಿತ್ತು. ಆದರೆ ಅಲ್ಲಿಗೆ ಹೋದಾಗ ನಮಗೊಂದು ರಸದೂಟವಿದ್ದೇ ಇರುತ್ತಿತ್ತು. ಅವರು ಪ್ರವಾಸ ಕೈಕೊಂಡಿದ್ದಾಗ, ಅಥವಾ ಕೆಲಸದ ಮಧ್ಯದಲ್ಲಿ, ರಚಿಸಿದ್ದ ಗೀತಗಳ ಪ್ರತಿ ನಮಗೆ ದೊರೆಯುತ್ತಿತ್ತು. ಆಗ ನಾನು ಅವರನ್ನು "ಕವಿತೆ ಬರೆಯುವುದಿಲ್ಲವೆಂದು ನೀನು ಮಾಡಿದ್ದ ಪ್ರತಿಜ್ಞೆ ಏನಾಯಿತು!" ಎಂದು ಛೇಡಿಸುತ್ತಿದ್ದೆ. ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರೇಮಿಗಳಾದ ಆಗಿನ ಮುಖ್ಯಮಂತ್ರಿ ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರು ಸಂತೋಷದಿಂದ ಗೋಪಾಲಕೃಷ್ಣರಾಯರು ರಚಿಸುತ್ತಿದ್ದ ಗೀತಗಳನ್ನವಲೋಕಿಸಿ ಪ್ರೋತ್ಸಾಹಿಸುತ್ತಿದ್ದರಂತೆ. ಆದರಿಂದ ಶ್ರೀ ಗೋಪಾಲಕೃಷ್ಣರಾಯರಿಗೆ ಸಾಹಿತ್ಯಬಾಂಧವ್ಯ ತೊಡೆದುಹೋಗಲಿಲ್ಲ.

ಶ್ರೀ ಗೋಪಾಲಕೃಷ್ಣರಾಯರು ಮುಖ್ಯಮಂತ್ರಿಗಳ ಕಚೇರಿಯಿಂದ ಹೊರಟುಬಂದಮೇಲೆ ಅವರು ಆಗ ರಚಿಸಿದ್ದ ಗೀತಗಳೆಲ್ಲವನ್ನೂ ಒಟ್ಟುಗೂಡಿಸಿ ನಮ್ಮ ಮಾಲೆಯಲ್ಲಿ ಪ್ರಕಟಿಸಬೇಕೆಂದಿರುವ ನನ್ನ ಬಯಕೆಯನ್ನು ಅವರಲ್ಲಿ ತಿಳಿಸಿದೆ. ಅವರು ಕಾರಣಾಂತರದಿಂದ ಒಡನೆಯೇ ಅವುಗಳನ್ನು ಪ್ರಕಟಿಸಲು ಅನುಮತಿ ಕೊಡದೆ ಎರಡು ವರ್ಷಗಳನ್ನು ಹಾಗೇ ತಳ್ಳಿದರು. ಈಗ ಅವುಗಳಲ್ಲಿ ಕೆಲವು ಕೃತಿಗಳನ್ನು ಈ ಸಂಕಲನದಲ್ಲಿ ಪ್ರಕಟಿಸಲು ತಮ್ಮ ಎಂದಿನ ಸೌಹಾರ್ದದಿಂದ ಒಪ್ಪಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ಈ ಗ್ರಂಥವನ್ನು ನನ್ನ ಅಣ್ಣಂದಿರಾದ ಶ್ರೀ ಟಿ. ಎಸ್. ವೆಂಕಣ್ಣಯ್ಯನವರಿಗೆ ಅವರು ಅರ್ಪಿಸುವುದರಲ್ಲೂ ಔಚಿತ್ಯವಿದೆ. ಅದು

ಶ್ರೀ ಗೋಪಾಲಕೃಷ್ಣರಾಯರು ತಮ್ಮ ಗುರುಗಳಲ್ಲಿ ಇಟ್ಟಿರುವ ಭಕ್ತಿಯನ್ನು ವ್ಯಕ್ತಪಡಿಸುತ್ತದೆ.

ಇದರಲ್ಲಿನ ಕೆಲವು ಗೀತಗಳು ಪ್ರಬುದ್ಧಕರ್ಣಾಟಕ, ಜೀವನ, ಕನ್ನಡ ನುಡಿ, ಪ್ರಕಾಶಿನಿ, ಮೈಸೂರು ಸರ್ಕಾರ ಸಚಿವಾಲಯ ಸಂಘದವರು ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆಗಳಲ್ಲಿ ಬಂದಿವೆ. 'ಆದಿತ್ಯದೇವ' ಎಂಬ ಕೃತಿಯನ್ನು ಆಕಾಶವಾಣಿಯವರು ವಾರದ ಹೊಸ ಹಾಡು ಎಂಬ ಕಾರ್ಯಕ್ರಮದಲ್ಲಿ ಪ್ರಸಾರಗೊಳಿಸಿದ್ದಾರೆ. ಈ ಕೃತಿಗಳನ್ನು ಈ ಸಂಕಲನದಲ್ಲಿ ಸೇರಿಸಿಕೊಳ್ಳಲು ಅನುಮತಿಯಿತ್ತುದಕ್ಕಾಗಿ ಆಯಾ ಸಂಸ್ಥೆಗಳ ಅಧಿಕಾರಿಗಳಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇದರಲ್ಲಿನ ಗೀತಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟು ಕರಡಚ್ಚನ್ನು ತಿದ್ದಿ ಉಪಕಾರಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಕಚೇರಿಯ ಪಂಡಿತರಾದ ವಿದ್ವಾನ್ ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರಿಗೂ, ರಾಗ-ತಾಳಗಳನ್ನು ಪರಿಷ್ಕರಿಸಿ ಕೊಟ್ಟ ವೈಣಿಕವಿದ್ವಾನ್ ಬ್ರಹ್ಮಶ್ರೀ ಚಿ. ವಿಶ್ವೇಶ್ವರಯ್ಯನವರಿಗೂ, ರಕ್ಷಾಪತ್ರಕ್ಕೆ ಉಪಯೋಗಿಸಿರುವ ಚಿತ್ರಗಳನ್ನು ನಮಗೆ ಒದಗಿಸಿ ಕೊಟ್ಟ ಶ್ರೀಯುತರಾದ ಬಿ. ಕೇಸರ್‌ಸಿಂಗ್ ಮತ್ತು ಎ. ಸಿ. ಆದಿನಾರಾಯಣ ಅವರಿಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟದ ಅಧಿಕಾರಿವರ್ಗದವರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಮೈಸೂರು
ವಿಳಂಬಿನಾಮ ಸಂವತ್ಸರ
ಮಾರ್ಗಶಿರ ಬಹುಳ ಸಪ್ತಮಿ
ತಾ॥ ೧-೧-೧೯೫೯

ತ. ಸು. ಶ್ಯಾಮರಾಯ

ಎನ್ನ ನುಡಿ

ಹಲಕೆಲವು ನುಡಿಗಳನು ಹೆಣೆದಿರುವೆನಾದರೂ
ಕವಿಯೆಂದು ನಾನೆಂದು ಕರೆಸಿಕೊಳಲಾರೆ
ಹಲವಾರು ಕತೆಗಳನು ಬರೆದಿರುವೆನದರಿಂದ
ಕತೆಗಾರನೆಂದೆನಲು ಓಗುಟ್ಟುವೆ

ಸಾಹಿತ್ಯ ಕ್ಷೇತ್ರದೊಳಗಡಿಯನಿಟ್ಟೆನು ಮೊದಲು
ಆಂಗ್ಲ ಭಾಷೆಯೊಳೆರಡು ಕೃತಿಯ ರಚಿಸಿ
ಸಾಹಿತ್ಯಗುರುವೆಮ್ಮ ಮಾನ್ಯ ವೆಂಕಣ್ಣಯ್ಯ
ನುಡಿದರೆನ್ನೊಳು ಕೃತಿಗಳೋದಿ ಹರಸಿ

ಬರೆವ ಹಂಬಲ ನಿನ್ನೊಳಿರುವುದನು ಕಂಡೆನಗೆ
ಸಂತೋಷವಾಯ್ತು ಬರೆಹವ ಮುಂದುವರಿಸು
ಪರಭಾಷೆಯೊಳಗೇಕೆ ತಾಯನುಡಿಯಲಿ ರಚಿಸಿ
ಭಾವಗಳ ತಿಳಿಯಾಗಿ ಜನರ ಮುಂದಿರಿಸು

ಇಂತೆಂದು ನುಡಿದುದೊಂದೇ ಅಲ್ಲ ಎನ್ನನೇ
ಕರ್ಣಾಟ ಸಂಘಕ್ಕೆ ಕರದೊಯ್ದರು
ಅಲ್ಲಿ ಆಚಾರ್ಯ ಶ್ರೀ ಕೃಷ್ಣಶಾಸ್ತ್ರಿಗಳಡಿಯೊ-
ಳೆನ್ನ ಕನ್ನಡಸೇವೆ ಸಲಿಸೆ ನಿಲಿಸಿದರು

ಹಿರಿಯರಾಶೀರ್ವಾದ ಸ್ನೇಹಿತರ ಪ್ರೋತ್ಸಾಹ
ದೊರೆಯೆ ಕನ್ನಡರಂಗಕಂದಿಳಿದೆನು
ಕೃತಿಗಳನು ರಚಿಸಿದೆನು ಬಹುಮಾನ ಗಳಿಸಿದೆನು
ತರುಣ ಸಾಹಿತಿಯೆಂದು ಹೆಸರಾಂತೆನು

ಬೆಳಗಾವಿಯಲಿ ನಡೆದ ಸಾಹಿತ್ಯ ಮೇಳದಲಿ
ಶ್ರೀ ಶ್ರೀನಿವಾಸ ಜೋಂದ್ರೈಯರ ಕಾವ್ಯಧಾರೆ
ಎನ್ನ ಕಂಗಳ ತೊಳೆದು ಎನಗೊಲಿದು ಬಂದ ಕಲೆ
ಕವಿತೆಯಲ್ಲವು ಕತೆಯು ಎಂದು ತೋರಿಸಿತು

ಅಂದಿನಿಂದಲಿ ಕತೆಯು ನಾಟಕವ ಬರೆಯುತ್ತ
ಗದ್ಯ ರಚನೆಯಲೆರಡು ಹೆಜ್ಜೆಯಿಟ್ಟೆ
ಸಾಹಿತ್ಯ ಪರಿಷತ್ತಿನಾಡಳಿತದೊಳು ನಿಂತು
ನಾಡ ನುಡಿಗಳಿಗೆನ್ನ ಸೇವೆ ಸಲ್ಲಿಸಿದೆ

ಎಲೆಮರೆಯ ಕಾಯಿಯಂತಿರಲು ನಾ ಬಯಸಿದರು
ವಿಧಿಯೆನ್ನನೆಡಬಿಡದೆ ಹೊರಗೆಳೆಯುತಿಹುದು
ಸಹಕಾರ ಸಂಘಗಳ ನಡೆಪ ಹೊಣೆಯನು ಹೊರಿಸಿ
ಜನಸೇವೆಯೊಳೆ ಬಾಳ ನಿಲಿಸೆ ಬೆಸಸುವುದು

ಹೀಗಿರಲು ಶ್ರೀ ಹರಿಯ ಇಚ್ಛೆಯಿಂದೆನಗೊದಗೆ
ಮುಖ್ಯಮಂತ್ರಿಗಳೆಡೆಯೊಳಿರುವ ಹುದ್ದೆ
ಯಾರಿಗೂ ಸುಲಭದೊಳು ದೊರೆಯದನುಭವವೆನಗೆ
ನಾಲ್ಕು ವರ್ಷಂಗಳೊಳು ಲಭಿಸುವಂತಾಯ್ತು

ನಾಡೆಲ್ಲ ಸುತ್ತಿದೆನು ಮುಖ್ಯಮಂತ್ರಿಗಳೊಡನೆ
ಜನರ ಸುಖದುಃಖಗಳ ಮನಗಂಡೆನು
ಪರದೇಶದಿಂದಿಲ್ಲಿಗೈತಂದ ಅತಿಥಿಗಳ-
ನಾದರಿಸಿ ನಾಡಹಿತ ಬಯಸಿ ಬೆಳೆಸಿದೆನು

ರಾಜಕಾರಣಿಗಳೊಡನೆಚ್ಚರಿಕೆಯಲಿ ನಡೆದು
ರಾಜ್ಯದೇಳಿಗೆಗಾಗಿ ಹಾತೊರೆದೆನು
ಹಲವಾರು ಸಂದಿಗ್ಧ ಸಮಯದೊಳಗೊಲವಿಂದ
ಮುಖ್ಯಮಂತ್ರಿಗಳಾಸೆ ಫಲಿಸೆ ಶ್ರಮಿಸಿದೆನು

ಒಂದೊಂದು ಸನ್ನಿವೇಶವನಿಲ್ಲಿ ಚಿತ್ರಿಸಿ
ಉತ್ತಮೋತ್ತಮ ಕಥೆಗಳಾಗಿ ನಿಲ್ಲುವುವು
ಆದರವುಗಳನೆಲ್ಲ ಗದ್ಯದಲಿ ಬರೆಯಲಿಕೆ
ಕಾಲಾವಕಾಶವೆನಗಿರಲಿಲ್ಲವು

ತಡೆಯಲಾಗದ ಭಾವ ಹೃದಯವನು ಮೀರಿಬರೆ
ಹಾಡತೊಡಗಿದೆ ದಾಸರಾಯನಂತೆ
ಹಲವು ಜನ ಮೆಚ್ಚಿದರು ಹಾಸ್ಯಗೈದರು ಕೆಲರು
ಅಭಿನವ ಪುರಂದರನ ನೋಡೆಂದರು

ಕೆಲ ಮಿತ್ರರೆನ್ನೊಡನೆ ಸಹಕರಿಸಿ ನುಡಿಗಳನು
ಒಟ್ಟುಗೂಡಿಸಿ ಎನ್ನ ಮುಂದಿಟ್ಟರು
ಕೆಲವರಿದ ಪ್ರಕಟಿಸಲು ಮುಂದೆ ಬಂದರು ನಾನೆ
ಪ್ರಕಟನೆಯನಿದುವರೆಗೆ ತಡೆದಿಟ್ಟಿನು

ಶಾಮಣ್ಣನಾಗ್ರಹವ ತಡೆಯಲಾರದೆ ಇನ್ನು
ಪ್ರಕಟನೆಯ ಭಾರವನ್ನವಗೊಪ್ಪಿಸಿದೆನು
ಸಿಹಿಯೊ ಕಹಿಯೋ ಎಲ್ಲ ಆ ಗರಳಕಂಠನೇ
ಸಹಿಸಿಕೊಳ್ಳುವನೆಂದು ಧೈರ್ಯಗೊಂಡಿಹೆನು

ಮುಂದೆ ಎಂದಾದರೂ ಗದ್ಯದಲಿ ಬರೆಯುವೆನು
ಕತೆಯೊ ಕಾದಂಬರಿಯೊ ನೆನಪೆನುತಲೊ
ಜನರು ಮೆಚ್ಚಲಿ ಮೆಚ್ಚದಿರಲಿ ತಮ್ಮನು ತಾವೆ
ನೋಡಿಕೊಳಲಾಸ್ಪದವು ದೊರೆಯಬಹುದೊ

ಪದ್ಯವಾಗಲಿ ಗದ್ಯರಚನೆಯಾಗಲಿ ಎಲ್ಲ
ನಾಗೈದೆನೆಂದೆಂಬ ಹಮ್ಮು ಎನಗಿಲ್ಲ
ಎಲ್ಲ ರಚನೆಗು ಅವನೆ ಚಾಲಕನು ನಾ ಯಂತ್ರ -
ವೆಂದರಿತು ನಾ ನಿರುತ ನಡೆಯುತಿಹೆನು

ಯಂತ್ರವಿದು ಕುಂಟದೆಯೆ ಅವನಪೇಕ್ಷಿಸಿದಂತೆ
ನಡೆಯುತಿರಲಿ ಎಂದು ಬಯಸುತಿಹೆನು
ಗೋಪಣಾರ್ಯನ ಬಾಳು ಇಂತು ಸಾರ್ಥಕಗೊಳಲಿ
ಶ್ರೀಹರಿಯ ಕರುಣೆ ದೊರೆತಿರಲೆಂಬೆನು

ಗೋ. ಕೃ.

ಮೊದಲ ನುಡಿ

ಕುಮಾರ ಕೃಪದೊಳು ಕಚೇರಿ ಕೆಲಸ
ಎನ್ನ ಬಾಳಿನೊಳು ರಸ ನಿಮಿಷ
ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವ-
ರಾಶೋತ್ತರಗಳ ಶುಭ ದಿವಸ

ಹಗಲಿರಳೂ ಬಿಡುವಿಲ್ಲದ ಕೆಲಸ
ನಿದ್ರಾಹಾರವ ತೊರೆಯುತ ದಿವಸ
ಆದರು ಮನದೊಳಗೇನೋ ಹರುಷ
ಹೊಸ ಹೊಸ ಅನುಭವ ಪ್ರತಿ ನಿಮಿಷ

ಕ್ಷಾಮ ನಿವಾರಣೆಗೊಳಿಸಿದ ಕೆಲಸ
ಪಡಿತರ ಪದ್ಧತಿ ನಿಲಿಸಿದ ದಿವಸ
ಸಂಸ್ಕೃತಿ ಹರಡಲು ತೊಡಗಿದ ವರುಷ
ಎಲ್ಲರೊಳಾದುದು ಅತಿ ಹರುಷ

ವಿಧಾನ ಸೌಧವು ರೂಪುಗೊಳ್ಳುತಿರೆ
ಶಿಲ್ಪಕಲಾಕೃತಿ ಮೇಲೇಳುತಿರೆ
ತುಂಬಿತು ಜನರೊಳಗತ್ಯುತ್ಸಾಹ
ಮುಖ್ಯಮಂತ್ರಿಗೆ ಪ್ರೋತ್ಸಾಹ

ಕರ್ನಾಟಕ ರಾಜ್ಯೋದಯ ಕಹಳೆಯು
ಮೊಳಗಲು ನಾನಲ್ ನಗರದೊಳು
ಮುಖ್ಯಮಂತ್ರಿಯೊಂದಾಶಯ ಫಲಿಸಿತು
ಏಕೀಕರಣವ ಸಾಧಿಸಲು

ಹಳ್ಳಿಯಿಂದ ದಿಲ್ಲಿಯವರೆಗೆ
ಎಲ್ಲೆಲ್ಲಿಯು ಬಹು ಸತ್ಕಾರ
ಮುಖ್ಯ ಮಂತ್ರಿಯನು ಕನ್ನಡ ಜನತೆ
ಹೊಗಳಿತು ನಾಡೊಳು ಮನಸಾರ

ಮೈಸೂರಿನ ವೈಶಿಷ್ಟ್ಯಕೆ ಏಕೀ-
ಕರಣ ಧಕ್ಕೆ ತರಬಹುದೆಂದು
ಹೆದರಿದ ಪರಿಣತ ಜನ ಪ್ರತಿಭಟಿಸಲು
ಮುಖ್ಯಮಂತ್ರಿಗಾಯಿತು ನಂಜು

ಶಿಕ್ಷಣ ಪದ್ಧತಿಯನು ಮಾರ್ಪಡಿಸಲು
ಮುಖ್ಯಮಂತ್ರಿ ಯೋಜನೆ ತರಲು
ವಿದ್ಯಾದಾನದ ಭೂದಾನದ ಕರೆ
ಕೊನೆಗಂಡಿತು ಪದಯಾತ್ರೆಯೊಳು

ಕೊನೆಗೆ ಕಂಡೆವೈ ರುದ್ರನಾಟಕವ
ರಾಜಕಾರಣಿಗಳಂತಃಕಲಹವ
ದುರಂತ ನಾಯಕನಧಃಪತನವ
ರಾಜ್ಯಾಡಳಿತದ ವಿಧಿಯ ವಿಲಾಸವ

ಧರ್ಮರಕ್ಷಿಪನ ಧರ್ಮರಕ್ಷಿಸದೆ
ಕರ್ಮ ಪೂರ್ಣಗೊಳೆ ಫಲವು ಸಿದ್ಧಿಸದೆ
ಮುಳುಗೆ ಸೂರ್ಯ ಮತ್ತೆ ಳಿಯೊಳುದಿಸನೆ
ಮರಳಿ ಬೆಳಕು ಭೂವ್ಯೋಮ ಬೆಳಗದೆ

* * *

ಕೆಲಸದ ಮಧ್ಯದಿ ಭಾವತರಂಗ
ಹಾಡಿನರೂಪದಿ ಹೊರಬೀಳೆ
ಪದಗಳ ಗೋಪನು ಕೋದಿಟ್ಟಿಹನು
ಎಲ್ಲರು ಮುಡಿಯಲಿ ಹೂಮಾಲೆ

ಕುಮಾರ ಕೃಪ

ರಾಗ – ನಾದನಾಮಕ್ರಿಯ
ತಾಳ – ತಿಶ್ರ ಏಕ (ಛಾಪು)

ಬಾಪೂಜಿಯೀ ಭವನದಲ್ಲಿದ್ದರಂತೆ
ಈ ಪುರಾತನ ವೃಕ್ಷ ಪ್ರಾರ್ಥನಾ ಸ್ಥಳವಂತೆ
ಭಾರತದ ನಾಯಕರ ಪಾದಧೂಳಿಯು ಬೆರತು
ಈ ರಮ್ಯವನ ಪುಣ್ಯಕ್ಷೇತ್ರವೆನಿಸಿದೆಯಂತೆ
ಹಿಂದಿನ ದಿವಾನ ಶೇಷಾದ್ರಯ್ಯರಂದು ಈ
ಮಂದಿರವ ತಮಗೆಂದು ಕಟ್ಟಿಸಿದರಂತೆ
ಗಾಂಧೀಜಿ ಬಂದಿಲ್ಲಿ ವಿಶ್ರಾಂತಿ ಹೊಂದಿರಲು
ಅಂದಿಸಿಂದಲಿ ಸದನ ಪುಣ್ಯಸ್ಥಳವಂತೆ
ಆ ಮಹಾತ್ಮನ ಪುಣ್ಯ ಸ್ಮರಣೆ ಬರುತಿರಲೆಂದು
ಈ ಮಂದಿರದಿ ಮುಖ್ಯಮಂತ್ರಿಯಿಂದು
ರಾಮಣೀಯಕಗೊಳಿಸಿ ತಾನೆ ವಾಸಿಸತೊಡಗಿ
ನಾಮವಿತ್ತನು ಇದೊ 'ಕುಮಾರ ಕೃಪ'ವೆಂದು
ನಮ್ಮ ನಾಡಿನ ಜನರ ಆಸೆ ಆಕಾಂಕ್ಷೆಗಳು
ನಮ್ಮ ರಾಜ್ಯಾಡಳಿತ ಆಗುಹೋಗುಗಳು
ನಮ್ಮ ಮಂತ್ರಿಗಳಿಲ್ಲಿ ಚರ್ಚಿಸುತ್ತಿರುವಲ್ಲಿ
ನಮ್ಮ ಜನತೆಯ ದೃಷ್ಟಿ ಕೇಂದ್ರಿಸಿಹುದಿಲ್ಲಿ
ಭಾರತದ ರಾಷ್ಟ್ರಪತಿ ರಾಜೇಂದ್ರ ಬಾಬುವನು
ಧೀರ ನಾಯಕ ನೆಹರು ರಾಜಾಜಿಗಳನು
ಈ ರಮ್ಯ ಭವನದಲಿ ಕಂಡೆ ಸಂತಸಗೊಂಡೆ
ಭಾರತದ ಗೋಪಕೃಪೆ ಹಿರಿದೆಂದುಕೊಂಡೆ

ಧ್ವಜ ವಂದನೆ

ರಾಗ – ಅಠಾಣ
ತಾಳ – ಝಂಪೆ

ಹಾರಾಡುತಿದೆ ನೋಡು ಭಾರತದ ರಾಷ್ಟ್ರಧ್ವಜ
ಭಾರತದೊಳೆಲ್ಲೆಲ್ಲು ಒಂದೆ ಧ್ವಜವು
ಭಾರತಾದ್ಯಂತವಿಂದೊಂದೆ ರಾಜ್ಯಾಡಳಿತ
ಭಾರತೀಯರಿಗೊಂದೆ ರಾಜ್ಯಾಂಗ ರಚನೆ

ಹಿಂದು ಪಾರಸಿ ಬೌದ್ಧ ಸಿಕ್ಖ ಮುಸಲಿಮ ಕ್ರಿಸ್ತ
ಹಿಂದುಳಿದ ಜನರೆನದೆ ಎಲ್ಲರೊಂದಾಗೆ
ತಂದಿತ್ತ ಗಾಂಧೀಜಿ ಪರದಾಸ್ಯವನು ಹರಿಸಿ
ಇಂದು ಈ ಸೌಭಾಗ್ಯ ಸ್ವಾತಂತ್ರ್ಯಗಳಿಸಿ

ರಾಮಕೃಷ್ಣರ ಕಾಲದೊಳು ಭಾರತಾದ್ಯಂತ
ಭೂಮಿಯೊಡೆತನವೋರ್ವ ರಾಜ್ಯಕಿರಲಿಲ್ಲ
ಆ ಮೌರ್ಯ ಮೊಗಲರಾಂಗ್ಲರು ಸಾಧಿಸದಕಾರ್ಯ
ಈ ಮಹಾತ್ಮನು ಸಾಧಿಸಿದ ಸತ್ಯವ್ರತದಿ

ಜಾತಿ ಮತ ಭಾಷೆ ಭೇದವ ಹರಿಸಿ ದೊರಕಿಸಿದ
ಸ್ವಾತಂತ್ರ್ಯಸಿರಿಯ ಕಾಪಾಡಿಕೊಳಬೇಕು
ಖ್ಯಾತಿಗೊಳಿಸಿದ ನಾಡ ಸಂಸ್ಕೃತಿಯ ಬಲದಿಂದ
ಭೂತಗಣಗಳನೆಲ್ಲ ಸೋತು ಗೆಲಬೇಕು

ಜಯಿಸು ನೀ ನಾಡ ಸಂಪದವ ನೂರ್ಮಡಿಗೊಳಿಸಿ
ಜಯಿಸು ನೀನೆಲ್ಲರೊಳು ಶಾಂತಿ ನಿಲಿಸಿ
ಜಯವನುದ್ಘೋಷಿಸುತ ಗೋಪ ವಂದಿಸುತಿಹನು
ಜಯಸುತ್ತಲೆಂದೆಂದು ಧ್ವಜ ಹಾರಲೆಂದು

ಗೀತಗಳು

ಭಾಗ ೧

ಪರಿವಿಡಿ

ಬಿನ್ನಹ

ರಾಗ – ಕಾನಡಾ
ತಾಳ – ಆದಿ

ಬಿನ್ನಹವಿದನೀನಾಲಿಪುದೊ
ಎನ್ನಯ ಕರಗಳ ಜೋಡಿಸಿ ಬೇಡುವೆ

ದೇವನೆ ನಿನ್ನನು ಬಿಟ್ಟಿನ್ನಾರಿಗು
ದೇಹವ ಬಾಗಿಸಿ ಕರ ಜೋಡಿಸದೆ
ಜೀವನ ನಡೆಸುವ ಸಾಮರ್ಥ್ಯವನು
ಶ್ರೀಹರಿಯೆನ್ನೊಳು ನೀ ದಯಪಾಲಿಸೊ

ಎನಗೀ ಜೀವನದಲಿ ನಿಯಮಿಸಿದ
ದಿನವ್ಯಾಪಾರಂಗಳ ಮುಗಿಯಿಸುತ
ಮನದೊಳಗಿನಿತಾದರು ಅಳುಕಿಲ್ಲದೆ
ಮನೆಯನು ಮುಟ್ಟುವ ಮನವನುಗೊಳಿಸೊ

ಅನ್ನಕೆ ದುಡಿಯುವ ಜೀವನವೊಂದನೆ
ಎನ್ನೊಳು ನಿಲಿಸದೆ ರಸದನುಭವಕೆ
ಸನ್ನುತ ಮನವ ಪ್ರಚೋದನೆಗೊಳಿಸುತ
ಮುನ್ನಡಿಯಿಡಿಸುತಲೆನ್ನನು ನಡೆಸೊ

ಹತ್ತು ಜನರ ಹಿತ ಬಯಸುತ ದುಡಿಯುವ
ಚಿತ್ತವೃತ್ತಿಯು ಎನ್ನೊಳಗಿತ್ತು
ಉತ್ತಮ ಜೀವನ ನಡೆಯಿಸುವಂತೆ
ವೃತ್ತ ಶುದ್ಧಿಯನು ಸಂತತ ನಿಲಿಸೊ

ಭಕ್ತಿ ಪಥವನವಲಂಬಿಸಿ ನಿನ್ನನು-
ರಕ್ತಿಯಿಂದ ಬಾಳನು ಬೆಳಗಿಸಿ
ಮುಕ್ತ ಕಂಠದೊಳು ನಿನ್ನನು ಪಾಡುವ
ಶಕ್ತಿಯನಿತ್ತೀಗೋಪನ ಸಲಹೊ

ಆಸೆ

ರಾಗ – ಆರಭಿ
ತಾಳ – ಝಂಪೆ

ಇದು ಎನ್ನ ಹಿರಿಯಾಸೆ ಹರಿಯೆ
ಸದಯ ಸಂತತ ನಿನ್ನ ಚಿಂತನೆಯು ದೊರೆಯೆ

ಅರಳುತಿಹ ಮುಕುಳದಂತಿರುವುದೆನ್ನಯ ಮನವು
ಬಿರುಗಾಳಿ ಬೀಸಿ ದಳಗಳನೆ ಉದುರಿಸದೆ
ಸುಳಿವ ಮೆಲುಗಾಳಿಯಿಂ ವಿಕಸಿಪಂತನುಗೊಳಿಸಿ
ಚೆಲುವಾಗಿಸಯ್ಯ ವಿಭುವೆ

ನಿನ್ನ ಕೊರಳಿನೊಳಿರುವ ಹಾರವನು ಸೇರಲಿಂ-
ದೆನ್ನ ಮನಮುಕುಳ ತಳಮಳಿಸಲು
ಇನ್ನು ಉರಿ ಬಿಸಿಲಿಂದ ಕಂದಿಸದೆ ಕರುಣಿಪುದೊ
ನಿನ್ನ ಮಾಲೆಯೊಳೊಂದು ಸ್ಥಳವ

ಮಾಲೆಯನು ಸೇರಿ ಸನ್ಮೋಹನನೆ ನಿನ್ನ ಮೈ-
ಮೇಲೆ ಸುಳಿದಾಡಿ ಬ್ರಹ್ಮಾಂಡದೊಳಗೆ
ಲೀಲೆಯನು ಕಾಣುತಾನಂದಾಬ್ಧಿಯಲಿ ಗೋಪ-
ಸೋಲಾಡುವಂತೆ ಕೃಪೆಮಾಡೊ

ಮುರಳಿ

ರಾಗ – ಬಿಲಹರಿ
ತಾಳ – ಝಂಪೆ

ನಾ ನಿನ್ನ ಮುರಳಿ
ಕೃಪೆಯೆನ್ನೊಳಿರಲಿ

ನೀ ನುಡಿಸೆ ನಾನುಡಿವೆ
ನೀ ಬಿಸುಡೆ ಬರಿ ಕೊಳವೆ

ಹರಿ ನೀನು ನುಡಿಸುತಿರೆ
ಹರಿಯುವುದೊ ರಾಗಸುಧೆ
ಸಽ ರಿ ಗ ಪ ದಽ ಸಽ ಸ
ಸ ನಿ ದ ಪ ಮ ಗ ರಿ ಗ ಪ ದ

ನೀನೆ ವಾದನ ಶಕ್ತಿ
ನಾನೊಂದು ವಾದ್ಯ
ನೀನೊಲಿದು ನುಡಿಸದಿರೆ
ಏನುಂಟು ಸಾಧ್ಯ

ಎನ್ನ ನೀ ಪಿಡಿದೆತ್ತಿ
ನಿನ್ನಧರಗಳಿಗೊತ್ತಿ
ಸನ್ನುತನೆ ನುಡಿಯಿಸುತ
ಮುನ್ನ ಪೊರೆ ಗೋಪಯ್ಯ

ಅಂಕುರ

ರಾಗ – ಮೋಹನ
ತಾಳ – ಝಂಪೆ

ಆವುದೀ ಅಂಕುರವು
ಎನ್ನ ಮನದೊಳಗೊಡೆದು
ನಲ್ಮೆಯನು ಸೂಸುತಿಹುದು

ನಲ್ಲನಿನಿನುಡಿಯಂತೆ
ಮೆಲ್ಲ ಮೆಲ್ಲನೆ ಸುಳಿದು
ಉಲ್ಲಾಸಗೊಳಿಸುತಿಹುದು

ಬಾನಿನೊಳಗೈತಂದ
ಭಾನುವಿಗೆ ಬೆದರಿ ಆ
ಹಿಮನಿಕರ ಪರಿದಂತೆ
ಪಾರುತಿದೆ ಬೇಸರವು

ಹರಿಯುತಿದೆ ದೇಹದೊಳು
ಆವುದೋ ಜೀವಕಳೆ
ಮೊರೆಯುತಿದೆ ಚಿತ್ತವಿದು
ಮರಿದುಂಬಿ ಮೊರೆವಂತೆ

ಎದೆ ತುಂಬಿ ತುಳುಕುತಿದೆ
ಹರುಷನಿಧಿ ದೊರಕುತಿದೆ
ಬರುವ ಗೋಪನೆನುತ್ತೆ
ಭರವಸೆಯು ತೋರುತಿದೆ

ಕರೆ

ರಾಗ – ಮೋಹನ
ತಾಳ – ಮಿಶ್ರಛಾಪು

ಬರುವೆನೆಂದನೆ ಗೋಪಾಲ, ಎನ್ನ
ಕರವೆನೆಂದನೆ ಶ್ರೀಲೋಲ

ಬರುವನು ಬರುವನು
ಕರವಿಡಿಯುವನೆಂದು
ಬಯಸುತಲಿದ್ದೆ ದಿನ, ಇಂದು
ಬಯಕೆ ಕೈಗೂಡುವುದೆ

ಏನೆಂದು ಪೇಳಿದನೆ, ಸಖಿ
ಏನೇನ ಕೇಳಿದನೆ

ನಿನ್ನ ಸಖಿಗೆ ಪೇಳು
ಸಂಜೆಯಾಗಲು ಬರುವೆ-
ನೆಂದೊಮ್ಮೆಯಾಡಿದನೆ, ಪ್ರಭು-
ವಿಂದು ಬರುವೆನೆಂದನೆ

ತುಂಬಿದ ಬಾನಿನೊಳು, ಸಖಿ
ಇಂದುವ ನೋಡು ಅಲ್ಲಿ

ಇಂಬುಗೊಳಿಸುತಿಹ-
ನವನ ಕೇಳು ಎನ್ನ
ಇನಿಯನು ಹೊರಟಿಹನೊ, ಈಗ
ಎಲ್ಲಿ ಬರುತಲಿಹನೊ

ಮಾರುತ ಬೀಸುತಿಹ, ಸಖಿ
ಹರುಷವ ಸೂಸುತಿಹ

ಕೇಳವನನು ನೀನು
ಕಂಡನೊ ದೊರೆಯನ್ನು
ಎಂದೊ ಹೊರವಂಟನು, ನಡೆ
ಮಂದಮಾರುತನು

ಆಲಿಸು ದನಿಯೇನದೆ, ಸಖಿ
ಲಾಲಿಸು ಇನಿಯನದೆ

ಇನಿಯನ ಕೊಳಲಿನ
ಮೆಲುನುಡಿಯಂತಿದೆ
ಕರೆಯುತಲಿಹನೇನೆ, ಅಯ್ಯೊ
ಯಾವ ಪಕ್ಷಿಯೊ ಕಾಣೆ

ತಡವೇಕೆ ಮಾಡುವನು, ಸಖಿ
ತಡೆಯಲಾರೆನೆ ಇನ್ನು

ಅರಸು ಬಂದೆಲ್ಲೋ
ಅಡಗಿಕೊಂಡಿರುವನು
ಮರದಡಿ ಕೊಳದೆಡೆಯೊ, ನೋಡೆ
ಗೋಪ ನಿಂತಿಹನಿಲ್ಲೆ

ಸಂತಸ

ರಾಗ – ಹುಸೇನಿ
ತಾಳ – ಮಿಶ್ರಛಾಪು

ಎನಿತು ಸಂತಸವು
ಇಂದೆನಗೆ
ಮನ ಮೋಹನ ಕೃಷ್ಣ
ಮುರಳಿಯ ನುಡಿಯಿಸೆ

ನಂದ ಗೋಪಿಯ ಕಂದ
ಬೃಂದಾವನದೊಳು
ನಿಂದು ನುಡಿಸಲು ಕೊಳಲ
ವೃಂದೆಯಂತಾದೆನೈ

ನಾನೆ ಗೋಪಾಲನ
ವೇಣುವೆಂದೆನ್ನುತ್ತ
ಲೀನಗೊಂಡಿತು ಚಿತ್ತ
ಗಾನಲೋಲನಲಿ

ಎನ್ನೊಳಹೊರಗೂ
ಚೆನ್ನಿಗನೊಬ್ಬನೆ
ಸನ್ನುತ ಕಾಂಚನೊ
ಚಿನ್ಮಯ ರೂಪನು

ಗೋಪಣಾರ್ಯನು ಇಂದು
ಆನಂದ ಭರಿತನೊ
ಶ್ರೀಪದಾಂಭೋಜದಲಿ
ಆತ್ಮ ಸಮರ್ಪಿಸಿ

ವೈಣಿಕ

ರಾಗ – ಹರಿ ಕಾಂಭೋಜ
ತಾಳ – ಝಂಪೆ

ವೈಣಿಕನು ಬಾರದಿರೆ ವೀಣೆಯಿದ್ದೇನು ಫಲ
ಹರಿಯೊಲುಮೆ ದೊರಕದಿರೆ ಬಾಳು ವಿಫಲ

ಮಾರುತನು ಸುಳಿಯದಿರಲವಕಾಶದಲಿ ಮುರಳಿ
ನಿನ್ನ ಕೇಳುವರಾರು ನೀ ಬರಿಯ ಬಿದಿರು
ಮಾರುತನು ಎಲ್ಲೆಲ್ಲು ಎನಿತೆನಿತು ಸುಳಿದರೂ
ಕೊಳಲೊಂದು ಇರದಿರಲು ಗಾನವಿಹುದೆ

ಪದಗಳಿಂದಲಿ ಮೆರೆವ ಪಂಡಿತನ ಮನದಲ್ಲಿ
ಪ್ರತಿಭೆ ನಲಿದೊಲಿಯದಿರೆ ಕವಿತೆಯಹುದೆ
ಪ್ರತಿಭೆಯೆಂತೊಲಿಸಿದರು ಹೃದಯವುಮ್ಮಳಿಸಿದರು
ಪದಗಳೇ ಸುಳಿಯದಿರೆ ಕೃತಿಯಪ್ಪುದೆ

ಮಾನವನ ಆಕೃತಿಯು ಎನಿತು ಸುಂದರವಿರಲು
ಮನವು ವಿಕಸಿತವಾಗದಿರೆ ಬರಿಯ ಬರಡು
ಮನವು ಪರಿಪಕ್ವಗೊಳೆ ಸತ್ಕಾರ್ಯ ಕೈಗೊಳಲು
ದೇಹದಲಿ ಬಲಕುಗ್ಗೆ ಬಾಳು ಬೆಳಗುವುದೆ

ದೇವ ನಿನ್ನೊಲುಮೆಯಿರದಿರಲೆಲ್ಲಿ ಸುಕೃತ
ಆವ ಸುಖ ಸಂಪದವು ಎಲ್ಲಿ ವಿಹಿತ
ವೈಣಿಕನೆ ಬಾ ಎನ್ನ ಬಾಳ ವೀಣೆಯ ನುಡಿಸು
ಗಾನವನು ಹರಿಸಿ ಈ ಗೋಪನನು ತಣಿಸು

ಜೀವನ

ರಾಗ – ಯದುಕುಲ ಕಾಂಭೋಜಿ
ತಾಳ – ಝಂಪೆ

ಜೀವನವಿದೆನ್ನದೇನೊ ಶ್ರೀಹರಿಯೆ
ಎಲ್ಲವೂ ನಿನ್ನದರಿಯೆ

ವರುಷಂಗಳುರುಳಿದವು ಹಬ್ಬ ಹರಿದಿನಗಳೊಳು
ಸರಕಾರ ಸಂಸಾರ ಸಾವುನೋವಿನೊಳು
ಸರುವ ಕಾರ್ಯಂಗಳೊಳಗೆನ್ನ ಬಳಿಯಲೆ ನಿಂತು
ಕರವಿಡಿದು ನಡೆಯಿಸುತ ದಾರಿತೋರಿಸಿದೆ

ಸತಿಸುತರ ಒಲುಮೆಯಲಿ ಸ್ನೇಹಿಗರ ನಲುಮೆಯಲಿ
ಹಿತಜನರ ಹಿರಿಮೆಯಲಿ ಬದುಕು ಹುಲುಸಾಗೆ
ಖತಿಗೊಂಡ ಕಿರಿಯರುನ್ಮಾದದೊಳಗೆನ್ನ ಪರಿ-
ಸ್ಥಿತಿಯು ದುರ್ಬಲಗೊಳಲು ಅಭಯವಿತ್ತೆ

ವಿಜ್ಞಾನ ಸುಜ್ಞಾನ ಸಾಹಿತ್ಯವೊದಗಿಸಿದೆ
ಅಜ್ಞಾನವನು ದೂಡೆ ಪ್ರಾಜ್ಞರಾಶ್ರಯವಿತ್ತೆ
ಪ್ರಜ್ಞೆಗೊಂಡೆನೊ ನಿನ್ನ ಸೃಷ್ಟಿವೈಚಿತ್ರದಲಿ
ತಜ್ಞರನುಭಾವದಲಿ ಜ್ಞಾನದೊಲವಿನಲಿ

ಋತವೊಂದೆ ಗೆಲ್ಲುವುದು ಅನೃತವಲ್ತು ಎಂಬ
ಶ್ರುತವಾಕ್ಯದನುಭವವು ಜೀವನದೊಳಾಯ್ತು
ಕೃತಕೃತ್ಯತೆಯ ಪಡೆಯೆ ನಿಃಸ್ವಾರ್ಥಜೀವನವೆ
ಅತಿಮುಖ್ಯವೆಂದೆನಗೆ ಖಚಿತವಾಯ್ತು

ಹರುಷದಲಿ ಕಳೆಯಿಸೈ ಉಳಿದೆನ್ನ ದಿನಗಳನು
ಹರಿ ನಿನ್ನ ಪ್ರೇರಣೆಯೊಳೆನ್ನ ಕರ್ತವ್ಯದೊಳು
ಪರಿಗಣಿಸೆನ್ನೈ ಇನ್ನು ಬಾಳಿನೇರಿಳಿತಗಳ
ಕರುಣಾಳು ನಿನ್ನ ಕೃಪೆ ಸಾಕೊ ಗೋಪನಿಗೆ

ಚಂದ್ರಿಕೆ

ರಾಗ – ಕಲ್ಯಾಣಿ
ತಾಳ – ತ್ರಿಪುಟ

ಶೃಂಗಾರದಭಿಸಾರಿಕೆ ಹೇ ಚಂದ್ರಿಕೆ
ಕಂದರ್ಪವೈತಾಳಿಕೆ

ಚಂದ್ರಮಸ್ಸಂಜಾತೆ ಸೌಂದರ್ಯ ಸಂಭೂತೆ
ಮಂದಾನಿಲ ಸೇವಿತೆ ಸಂಭಾವಿತೆ

ಮಾನವನ ಮಧುರ ಸಖಿ ಮನೋಹರ ಚಂದ್ರಿಕೆ
ಭೂವ್ಯೋಮ ವಿಸ್ತಾರ ಪ್ರಶಾಂತವ್ಯಾಪಿಕೆ
ಸಾಗರದ ಪೇರಲೆಯೊಳುನ್ಮಾದ ನರ್ತಕಿ
ಹೇ ಚಿರಹಸನ್ಮುಖಿ ಹರಿಚರಣ ಸೇವಕಿ

ಮೃದು ಮಧುರ ಭಾವನಾವಿಚಾರಪ್ರಚೋದಿನಿ
ಸಾಹಿತ್ಯ ಸಂಗೀತ ಮನೋವಿಕಾಸಿನಿ
ರಸಿಕ ಜನ ರಂಜಿನಿ ವಿರಹಾಗ್ನಿ ವರ್ಧಿನಿ
ಯೋಗಿಜನವೃಂದಕಾನಂದಪ್ರದಾಯಿನಿ

ನಿನ್ನ ಜ್ಯೋತ್ಸ್ನೆಯೊಳೆನಿತೊ ಇರುಳ ನಾ ಕಳೆದಿರುವೆ
ಜೀವನದ ಕ್ಲೇಶಗಳನಲ್ಲಿ ತೊಡೆದಿರುವೆ
ಹಗುರವಾಗಲು ಮನವು ಶಾಂತಿಯನು ಗಳಿಸಿರುವೆ
ಅಶರೀರೆ ನಿನ್ನ ಪ್ರಭೆಗಿದೊ ಗೋಪ ನಮಿಪೆ

ಚಪಲ - ಮನ

ರಾಗ – ಬೇಗಡೆ
ತಾಳ – ತಿಶ್ರರೂಪಕ

ಚಪಲಗೊಂಡಿದೆ ಮನವು
ಸಫಲಗೊಳ್ಳಲು ಸುಕೃತ
ಅಪರಿಮಿತವಾಗೆ ಒಡ್ಡೋಲಗ

ಈ ಪುಷ್ಪವಾಪುಷ್ಪ-
ವೀಪರಿಯೊಳೋಲೈಸಿ
ಚಾಪಲ್ಯಗೊಂಡಿರುವ ಚಿಟ್ಟೆಯಂತೆ

ಅಧಿಕಾರ ಬೆಳೆದು ಬರ-
ಲದರ ಪ್ರಭಾವದಲಿ
ಒದಗುತಿರಲನುರಾಗ ಭೋಗಯೋಗ
ಪದವಿ ಸಂಪದ ಕೀರ್ತಿ-
ಯಧಿಕಗೊಳುತಿರೆ ಮನವು
ಹದಗೆಟ್ಟು ಹಾರಾಡುತಿದೆ ಚಪಲಗೊಂಡು

ನಿತ್ಯ ಜೀವನದಲ್ಲಿ
ಸತ್ಯವನು ಪರಿಕಿಸಲು
ಅತ್ಯಧಿಕ ಉತ್ಸಾಹ ಗೋಪನೊಳಗಿತ್ತು
ಹತ್ತು ಜನರೊಳು ಬೆರೆತು
ಚಿತ್ತ ಪರಿಶುದ್ಧಿಗೊಳೆ
ಬಿತ್ತಯ್ಯ ನೆಮ್ಮದಿಯನಚಲ ಮನವಿತ್ತು

ಬೆಳದಿಂಗಳು

ರಾಗ – ಹಿಂದೂಸ್ಥಾನಿ ಕಾಪಿ
ತಾಳ – ಏಕ

ಏನು ಹರುಷ ಹೃದಯದೊಳಗೆ
ಬಾನೊಳೇರೆ ತಿಂಗಳು
ಮೌನವುಳಿದು ಮೊರೆಯುತಿಹುದು
ಗಾನಲಹರಿ ಮನದೊಳು

ಇದೊ ಕುಮಾರಕೃಪದ ಬನದ
ಪೊದೆಯು ಗಿಡಮರಂಗಳು
ಸುಧೆಯೊಳದ್ದಿದಂತೆ ತೋರೆ
ಮಧುರ ಭಾವ ಸ್ಫುರಿಸಿತು

ಮಲ್ಲಿಗೆ ಸೇವಂತಿಗೆ ಸುಮ
ಮೊಲ್ಲೆ ಜಾಜಿ ರೋಜವು
ಎಲ್ಲ ಪುಷ್ಪ ಪರಿಮಳವನು
ಚೆಲ್ಲಿ ನಲುಮೆ ಬೆಳೆಯಿತು

ಮೆಲ್ಲ ಮೆಲನೆ ತೆಂಕಣಿಂದ
ಸುಳಿದು ಬರುತ ಮಾರುತ
ಇಲ್ಲಿ ಬನದ ಪೂಗಳಲ್ಲಿ
ನಲಿಯೆ ತಣ್ಪು ತಳೆಯಿತು

ವಾಣಿ ಬನವ ತುಂಬುತಿರಲು
ವೀಣೆ ನುಡಿಸೆ ಮಾನಿನಿ
ಗಾನವೆನ್ನ ತಣಿಸುತಿಹುದು
ಲೀನಗೊಂಡು ಚಿತ್ತವು

ಲೆಕ್ಕವಿಲ್ಲದಷ್ಟು ಕೆಲಸ
ಕೈಯತುಂಬ ಕುಳಿತಿರೆ
ಮಿಕ್ಕ ವ್ಯಸನವೆಲ್ಲ ಮರೆಸಿ
ಮೈಯಕೊಂಡುದೊಲುಮೆಯು

ದೇವಗಾನ ದಿವ್ಯಗಾನ
ಈ ವನದಲಿ ಮನದಲಿ
ಸಾವ ನೋವ ದೂರ ಸರಿಸಿ
ಜೀವವಮರಗೊಳಿಸಿತು

ಧ್ಯಾನದಲ್ಲಿ ನಿಂತ ಗೋಪ
ತನ್ನ ತಾನೆ ಮರೆತನು
ಆನಂದ ಸಾಗರದಲಿ
ಓಲಾಡುತಿರುವನು

ಕಳವು

ರಾಗ – ಶುಭ ಪಂತುವರಾಳಿ
ತಾಳ – ಮಿಶ್ರರೂಪಕ

ಹಣದ ಚೀಲವದಿಂದು ಕಳವಾದುದೇ ಎಂದು
ಎಣಿಸಲಾರದ ದುಃಖ ಮನವ ಮುಸುಕಿಹುದೊ
ಹಣವಾವುದೆಂಬರಿವು ಮನಕೆ ತೋಚದೆ ಬರಿದೆ
ತೃಣವನೇ ಗಿರಿಯೆಂದು ಬಗೆದು ಭ್ರಮೆಗೊಂಡು

ನಷ್ಟಲಾಭಗಳೆಲ್ಲ ಮನದೊಂದು ವಿಭ್ರಾಂತಿ
ನಿಷ್ಠೆಯಲಿ ಜೀವನವ ಸಾಗಿಸಲು ಮುಂದೆ
ತುಷ್ಟಿಯೊಂದೇ ಹಿರಿಯ ಸಿರಿಯೆಂಬ ಭಾವನೆಯು
ಕಷ್ಟಗಳ ತೊಡಕಿರದೆ ಕಾವುದದು ದಿಟವು

ಹೊನ್ನು ಹೆಣ್ಣು ಮಣ್ಣು ಕೊನಗೆ ಮಣ್ಣಿನ ಪಾಲು
ಎನ್ನುವೆವು ನಾವೆಲ್ಲ ಚಿಂತೆ ಬಿಡಲಿಲ್ಲ
ಬನ್ನಪಡುವುದ ಬಿಡಿಸಿ ತೃಪ್ತಿತೊಡಗೆಯ ತೊಡಿಸಿ
ಸನ್ನುತನೆ ಗೋಪನನು ಸಲಹೊ ಸಂತತವು

ತೃಪ್ತಿ

ರಾಗ – ಆನಂದ ಭೈರವಿ
ತಾಳ – ಝಂಪೆ

ಎನಗೆ ಹಿತವಾವುದೆಂಬುದನು ನಾನರಿಯೆನೈ
ಘನಮಹಿಮ ನೀನಿತ್ತುದನೆ ಹಿತವು ಎನುವೆ

ಮನೆ ಮಠವು ಮಕ್ಕಳೈಸಿರಿ ಭೋಗ ಬಯಸಿದರೆ
ಕೊನೆಯಿಲ್ಲದಂತಾಯ್ತು ರೋಗರುಜಿನಕ್ಕೆ
ಜನರೊಳುನ್ನತ ಪದವಿಯಧಿಕಾರವನು ಬಯಸೆ
ಅನುಗೊಂಡಿತದರೊಡನಸೂಯೆ ಚಿಂತೆ

ಆಸೆಯೊಡ್ಡಿತು ದುಃಖ ಲೇಶ ಸುಖ ತರಲಿಲ್ಲ
ಗಾಸಿಗೊಂಡಿತು ಮನವು ಅದನಿದನು ಬಯಸಿ
ಮೋಸವಾಯಿತೊ ಮನಕೆ ಪರಿಮಿತಿಯು ನಿಲುಕದೆಯೆ
ಆಸೆಯಲೆ ಆಯುಸ್ಸು ಕ್ಷೀಣಗೊಳುತಿಹುದೊ

ನೀನಿತ್ತುದಕೆ ತೃಪ್ತಿಗೊಳುವ ಪ್ರತಿಪತ್ತಿಯನು
ಶ್ರೀನಿವಾಸಾ ಎನ್ನ ಮನದಿ ನಿಲಿಸೊ
ಸಾನುರಾಗಾನಂದವೊಂದನೇ ಹೃದಯದಲಿ
ದೀನ ಗೋಪನೊಳೊಲಿದು ಹೊರಹೊಮ್ಮಿಸೊ

ಬಯಕೆ

ರಾಗ– ಕಾಂಭೋಜ
ತಾಳ– ಝಂಪೆ

ಇದನೆ ಗೋಪನೆ ನಿತ್ಯ ಬಯಸುತಿಹೆನೊ, ಎನ್ನ
ಹೃದಯವನು ಪರಿಶುದ್ಧಿಗೊಳಿಸೆಂಬೆನೊ

ಅಧಿಕಾರಿ ನಾನೆಂಬ ವ್ಯಾಮೋಹವಾವರಿಸಿ
ಮದಕೆ ನೆಲೆವೀಡಾಗಿ ಕೋಪಗೊಳುತಿರುವೆ
ಉದಿಯಿಸಲು ಜ್ಞಾನವೆನ್ನವರೆಲ್ಲರೂ ಎಂದು
ಹದಗೊಳ್ಳುವುದು ಮನವು ಪ್ರೇಮವರಸುವುದು

ಕಾಮಿತವು ನಿನ್ನೊಲುಮೆ ಆ ನೀನು ಸರ್ವರೊಳು
ಪ್ರೇಮ ತೋರಲು ಅವರೊಳಾಯ್ತು ಸ್ವಸಿದ್ಧಿ
ಈ ಮನೋಧರ್ಮಕ್ಕೆ ಯತ್ನಿಸಲು ಬಯಸಿಯೂ
ನೇಮ ನಿಲ್ಲದೆ ಮುಳಿದು ಬೆಚ್ಚುತಿಹೆನಯ್ಯ

ಸುಖ ದುಃಖ ವಿಭ್ರಾಂತಿ ವಶಗೊಂಡ ಚಿತ್ತದಲಿ
ಸಕಲ ಹಿತವನು ಮರೆತು ಸ್ವಾರ್ಥಿಯಾಗಿ
ಅಖಿಲಾತ್ಮ ನೀನೆಂಬ ಭಾವನೆಯ ನೀಗುವೆನೊ
ವಿಕೃತಿಯಿಂದ ಮಾಣಿಸೈ ಅಕಳಂಕಚರಿತ

ಶ್ರೀನಿವಾಸನೆ ನಿನ್ನ ಕಾಣಬಯಸುತಲಿಹೆನೊ
ನೀನೆದುರೊಳಿದ್ದರೂ ಕಣ್ಣರಿಯದಯ್ಯ
ಏನು ಹೇಳುವೆನೆನ್ನ ಸೋಜಿಗದ ಚಿತ್ತಕ್ಕೆ
ಜ್ಞಾನಿಗಳ ವಿಭು ನೀನೆ ತಿದ್ದೊ ಗೋಪಯ್ಯ

ಗುರು ಕೃಪೆ

ರಾಗ – ಮಧ್ಯಮಾವತಿ
ತಾಳ – ತಿಶ್ರ ಏಕ

ಹೆದರಿಕೆಯೆನಗೇಕೆ, ಎನ್ನ
ಬದುಕನು ತಿದ್ದಲು ಗುರು ಹೊಣೆಹೊತ್ತಿರೆ

ಒಡನಾಡಿಗಳ ಸಂಘದಲ್ಲಿ ಕೈ-
ಹಿಡಿದ ಕಾರ್ಯರಂಗಳಲ್ಲಿ, ಎನ್ನ
ಮಡದಿ ಮಕ್ಕಳ ಸಲಹುವಲ್ಲಿ, ಸುಳಿದ
ಎಡರುಗಳೆಲ್ಲವ ಕಡೆಹಾಯಿಸುತ್ತಿರೆ

ಹತ್ತು ಜನರ ಮಧ್ಯದಲ್ಲಿ, ಸಾ-
ಹಿತ್ಯದ ಅಧ್ಯಯನದಲ್ಲಿ, ಎನ್ನ
ನಿತ್ಯ ಜೀವನರಂಗದಲ್ಲಿ, ನಿಂತು
ಸತ್ಯವ ಪರಿಕಿಪ ಚಿತ್ತವೃತ್ತಿಯ ತರೆ

ಧರ್ಮ ಮಾರ್ಗದೊಳೆನ್ನ ನಡೆಸಿ, ಎನ್ನ
ಕರ್ಮ ಸವೆಯಲನುಗೊಳಿಸಿ, ಮುನ್ನ
ನಿರ್ಮಲಾಂತಃಕರಣ ಬೆಳಸಿ, ಒಳ
ಮರ್ಮವ ತಿಳಿಸಿ ಗೋಪನ ಕೃಪೆ ದೊರಕಿಸೆ

ಗೀತಗಳು

ಭಾಗ ೧

ಪರಿವಿಡಿ

ಮಾನವತೆ

ರಾಗ – ಬಿಲಹರಿ
ತಾಳ – ಝಂಪೆ

ಮಾನವೀಯತೆಯೊಂದೆ
ಸಾಕು ನಮಗೆ

ಬಾನವರ ಸುಧೆ ಬೇಡ
ದಾನವರ ಬಲ ಬೇಡ

ಸುಖದುಃಖ ಬೆರೆತಿರಲಿ
ವಿರಹಮಿಳನಗಳಿರಲಿ
ಎಳೆಮಕ್ಕಳೊಡನಾಟ
ದೊರೆಯುತಿರಲಿ

ಚೆಲುವನಿಳೆಯೊಳು ಕಂಡು
ಸುಖಿಪ ಮನವೆಮಗಿರಲಿ
ಮಧುರ ಗಾನವು ಸುಳಿಯೆ
ಮನವರಳಲಿ

ಬೆವರ ಹರಿಸುವ ಕೆಲಸ
ಸತತ ಲಭಿಸುತ್ತಿರಲಿ
ದುಡಿಮೆಯಿಂದಲೆ ಸುಕೃತ
ಫಲಿಸಿ ಬರಲಿ

ಹತ್ತು ಜನರೊಳು ಬೆರೆವ
ಜೀವನವು ದೊರೆತಿರಲಿ
ಚಿತ್ತವೆಲ್ಲರ ಹಿತವ
ಬಯಸುತಿರಲಿ

ಕೈಲಾದ ಸೇವೆಯನು
ಗೈವ ಹಂಬಲವಿರಲಿ
ಕೈಗೆಮೀರಿದ ಚಿಂತೆ
ಬೆಳೆಯದಿರಲಿ

ಈ ಗೋಪಣಾರ್ಯನೊಳ-
ಗಾನಂದ ಮೂಡಿರಲಿ
ಶ್ರೀಪದಾಂಭೋಜದಲಿ
ಆತ್ಮ ನಿಲಲಿ

ದುಡಿಮೆ

ರಾಗ – ಭೈರವಿ
ತಾಳ – ಝಂಪೆ

ದುಡಿ ದುಡಿ ದುಡಿ ಮಾನವ
ಹಿಡಿದ ಕೆಲಸವ ಬಿಡದೆ ದೃಢವಾಗಿ ಅಡಿಯಿಡುತ

ಜೀವರಾಶಿಗಳಲ್ಲಿ ಮಾನವನ ಬೇರ್ಪಡಿಸಿ
ದೇವನಿತ್ತನು ನಾಲ್ಕು ವೈಶಿಷ್ಟ್ಯ ಶಕ್ತಿ
ನಿಂತು ನಡೆಯುವ ಶಕ್ತಿ ನೋಟನಿಲಿಸುವ ಶಕ್ತಿ
ಚಿಂತನೆಯ ಶಕ್ತಿ ಹೆಬ್ಬೆರಳ ಹಿರಿಶಕ್ತಿ

ಈ ನಾಲ್ಕು ಶಕ್ತಿಗಳ ಜೀವನದೊಳಳವಡಿಸಿ
ಲೋಕಕಲ್ಯಾಣವನು ಸಂತತವು ಬಯಸಿ
ಜ್ಞಾನ ವಿಜ್ಞಾನ ಸಂಶೋಧನೆಯ ಫಲ ಗಳಿಸಿ
ಬೇಕಾದ ಯಂತ್ರೋಪಕರಣ ರಚಿಸಿ

ಹರಿವ ನೀರಿಗೆ ತಡೆಯ ಕಟ್ಟಿ ಬೆಳೆ ನೂರ್ಮಡಿಸಿ
ಧುಮುಕುವಾಧಾರೆಯಿಂ ಬೆಳಕ ತರಿಸಿ
ಅಣುವ ವಿಭಜಿಸಿ ಅದರ ಶಕ್ತಿಯನ್ನನುಗೊಳಿಸಿ
ಅಮಿತ ಸಂಪದವಿಳೆಗೆ ತಂದಿತ್ತೆ ಶ್ರಮಿಸಿ

ನಿನ್ನ ದುಡಿಮೆಯ ಫಲವ ದೇವ ಮೆಚ್ಚದೆ ಇಹನೆ
ನಿನ್ನ ಶ್ರದ್ಧಾಸಕ್ತಿಗಾನಂದಪಡನೆ
ಸೃಷ್ಟಿನಿಯಮವನರಿತು ಸಂತುಷ್ಟಿತರಲಿಳೆಗೆ
ಇಷ್ಟಾರ್ಥ ಸಲ್ಲಿಸನೆ ಗೋಪ ನಿನಗೊಲಿದು

ಅಭಯ

ರಾಗ – ಸುರಟ
ತಾಳ – ಆದಿ

ಅಂಜಿಕೆ ಪಡಬೇಡ, ಮನದಲಿ
ಚಿಂತಿಸಿ ಕೆಡಬೇಡ

ನಡೆವ ಕಾಲ್ಗಳಾಗೆ, ಅವುಗಳು
ಎಡಹದಿರ್ಪವೇನೊ

ತಪ್ಪು ಇಲ್ಲದಿಲ್ಲ, ಬಾಳಿನೊ–
ಳೊಪ್ಪ ತೋರದೆಲ್ಲ

ತಪ್ಪುಗೈಯೆ ನೀ–
ನೊಪ್ಪಿಕೊಂಡರಾ–
ಪತ್ತು ಹರಿದು ಸಂ–
ಪತ್ತು ದೊರಕುವುದೊ

ಅರ್ಥಮೋಹ ಬೇಡ, ಬಾಳನ:
ವ್ಯರ್ಥಗೊಳಿಸ ಬೇಡ

ಸ್ವಾರ್ಥವಳಿದು ನಿಃ–
ಸ್ವಾರ್ಥಿಯಾಗೆ ಸತ್–
ಕಾರ್ಯದಲ್ಲಿ ಮನ
ಸಕ್ತವಾಗುವುದೊ

ಸತ್ಯಕೆಂದು ಜಯವೊ ತಿಳಿ ಅ-
ಸತ್ಯಕೆ ಅಪಜಯವೊ

ಸತ್ಯವ ಪರಿಕಿಪ
ಚಿತ್ತವೃತ್ತಿ ಬರೆ
ನಿತ್ಯ ಜೀವನವು
ಉತ್ತಮಗೊಳ್ವುಡೊ

ಹರಿಯೊಳಿರಲು ಭಕ್ತಿ, ಬರುವುದು
ಧರುಮದೊಳಾಸಕ್ತಿ

ಸರ್ವಜನರ ಹಿತ-
ವಾಗೆ ನಿನ್ನ ಮತ
ಸರ್ವಮಂಗಳವ-
ನೀವನು ಗೋಪನು

ಸೇಡು

ರಾಗ – ಕಾಂಭೋಜ
ತಾಳ – ಝಂಪೆ

ಸೇಡ ತೀರಿಸಿಕೊಳುವ ಛಲವು ಬೇಡ
ಕೇಡ ಬಯಸಿದವಂಗೆ ಮೃಷ್ಟಾನ್ನ ನೀಡು

ಕೇಡನ್ನು ಬಯಸಿ ಬಂದವನೊಡನೆ ಸೆಣಸಿದರೆ
ಕೇಡು ತಪ್ಪದೊ ನಿನಗೆ ಅವನಿಗೂ ಕೊನೆಗೆ
ಸೇಡುತೀರಿಸಿಕೊಳುವ ಚಿಂತೆಯೇ ಬಲವಾಗೆ
ಕಾಡುವುದೊ ನಿನ್ನನ್ನು ದುಗುಡವೆಡಬಿಡದೆ

ಕೇಡೆಣಿಸಿ ಬಂದವನ ಲೆಕ್ಕಿಸದೆ ಧೈರ್ಯದೊಳ-
ಗೋಡಾಡಿಕೊಂಡಿಹುದೆ ಪುರುಷಾರ್ಥವೆ
ಕೇಡೆ ಕೇಡೆಣಿಸಿದನ ಕೊರೆದು ತಿನ್ನುವುದೆಂಬ
ರೂಢಿ ಸಾಧಾರಣವು ಹಿರಿಯತನವಲ್ಲ

ಕೇಡ ಬಯಸಿದ ಜನರೊಳೊಳ್ಳೆ ನುಡಿಗಳ ನುಡಿದು
ನೀಡಿ ಮೃಷ್ಟಾನ್ನವನು ನೇಹಗೊಳಿಸೆ
ಕೇಡೆ ಎದ್ದೋಡುವುದು ಸೇಡಿಗಾಸ್ಪದವಿರದು
ನಾಡೆ ಸುಖಿಸುವರವರು ಗೋಪನೊಲಿಯುವನು

ಉದ್ರೇಕ

ರಾಗ – ಅಠಾಣ
ತಾಳ – ಝಂಪೆ

ಕ್ಷುದ್ರರಾಡಿದ ನುಡಿಗೆ ಉದ್ರೇಕಗೊಳಲೇಕೆ
ರೌದ್ರಾವತಾರವನು ತಾಳಲೇಕೆ

ಎದ್ದು ತೋರುವ ಮನದ ದೌರ್ಬಲ್ಯವನು ತೊರೆದು
ಸಿದ್ಧನಾಗೈ ಹೃದಯಶುದ್ಧಿಯನು ಪಡೆದು

ನೀನು ನುಡಿದಂತೆಲ್ಲ ಜನರೇಕೆ ನಡೆಯುವರು
ನಿನ್ನಾಣತಿಯೆ ವೇದವಾಕ್ಯವೇನು
ಊನಗೊಳ್ಳಲು ಮಾನವೆದುರುಬೀಳುವರಯ್ಯ
ನಿನ್ನ ಚಿಂತನೆಯರಿಯೆ ಸಮಯವೆಲ್ಲಯ್ಯ

ಸೇವೆ ಕೈಕೊಳುವಲ್ಲಿ ಹಮ್ಮಿಗೆಡೆಯಿಲ್ಲಯ್ಯ
ದಾಸಾನುದಾಸ ನೀನೆಂದು ತಿಳಿಯಯ್ಯ
ಯಾವಕಾಲಕು ಸಂಸ್ಥೆ ಹಿರಿದು ವ್ಯಕ್ತಿಯು ಅಲ್ಲ
ಈಶ ಸೇವೆಯು ಸಂಘ ಸೇವೆಯೊಳಗಯ್ಯ

•

ಸ್ಮಿತವದನನಾಗಿ ನೀನೆಲ್ಲರೊಳು ಬೆರೆಯಯ್ಯ
ಸತತ ಸಂಪ್ರೀತಿ ಗಾಂಭೀರ್ಯವಿರಲಯ್ಯ
ಮಿತಭಾಷಿಯಾಗಿ ವ್ಯವಹಾರವನು ನಡೆಸಯ್ಯ
ಹಿತ ಬಯಸುತೆಲ್ಲರನು ಒಲಿಸಿಕೊಳ್ಳಯ್ಯ

ಒಂದಲ್ಲವೊಂದುದಿನ ಜನರರಿಯುವರು ನಿನ್ನ
ಒಂದು ಋಜುಮಾರ್ಗವನು ನೀನು ಹಿಡಿಯೆ
ಬಂದ ಎಡರುಗಳೆಲ್ಲ ಮಂಜಿನೊಲು ಚದರುವುವು
ಕಂದರ್ಪಪಿತ ನಿನ್ನ ಕಾವ ಗೋಪಯ್ಯ

ಮೃದು ಮಾತು

ರಾಗ – ಮುಖಾರಿ

ತಾಳ – ಝಂಪೆ

ಮೃದುವಾಗಿ ಮಾತಾಡು ಮೊದಲು ನಿನ್ನಾಶ್ರಿತರ
ಹೃದಯತಂತಿಯ ಮಿಡಿದು ಮುದವ ನೀಡು

ಕಡುಬಡವರಲ್ಲುಂಟು ದುಃಖಿಗಳು ಸಾತ್ವಿಕರು
ಗಡಸುನುಡಿಗಳ ಸಹಿಸಿ ಎನಿತೊ ನೊಂದಿಹರು

ರಾಜ್ಯಾಂಗ ನೀತಿಯೊಳಗೆಲ್ಲರಿಗು ಸಮ ಹಕ್ಕು
ರಾಜ್ಯ ಸೂತ್ರವು ಇಂದು ಪ್ರಜೆಯೊಳಿಹುದು
ರಾಜ್ಯದೊಳಗಧಿಕಾರಿ ಕೃಷಿಗಾರ ಕಾರ್ಮಿಕರು
ರಾಜ್ಯದೇಳಿಗೆ ಬಯಸಿ ದುಡಿಯುತಿಹರು

ದೇವನೆದುರೊಳಗೆಲ್ಲ ಮಾನವರು ಸರಿಸಮರು
ಸಾವುನೋವುಗಳಲ್ಲಿ ಇಲ್ಲವಂತರವು
ಜೀವನವ ನಡೆಯಿಸಲು ಓರೋರ್ವರೊಂದೊಂದು
ಸೇವೆಯನು ಕೈಕೊಂಡು ಶ್ರಮಿಸುತಿಹರು

ಎಲ್ಲರೊಳಗಿರುವ ಪರಮಾತ್ಮನೊಬ್ಬನೆ ಎಂದು
ಎಲ್ಲರೊಳು ಸುಖ ದುಃಖ ಸಮವು ಎಂದು
ನಿಲ್ಲೆ ನಿನ್ನಲಿ ಭಾವವೆಲ್ಲರಲಿ ಸಮದೃಷ್ಟಿ
ಚೆಲ್ಲಿ ಬರೆ ಗೋಪನೊಲಿದೀವ ಶ್ರೇಯವನು

ಹೃದಯ ವೈಶಾಲ್ಯ

ರಾಗ – ಭೈರವಿ
ತಾಳ – ತಿಶ್ರರೂಪಕ

ಹೃದಯ ವೈಶಾಲ್ಯವಿರಲಯ್ಯ ನಿನಗೆ
ಪದವಿ ಸಂಪದ ಕೀರ್ತಿ ಬೆಳೆದುಬಂದಂತೆ

ಹರಿವ ಝರಿ ತೊರೆಯಾಗಿ ತೊರೆಯು ಹಿರಿಹೊಳೆಯಾಗಿ
ಸರಿದು ಸಾಗರ ಸೇರಿ ವಿಸ್ತರಿಸುವಂತೆ
ಹರಿದು ಸದ್ಭಾವಗಳು ಬೆಳೆದು ಮನ ಚೇತನವು
ಹಿರಿದಾಗಲೈ ಬಾಳು ಕೆಳೆಯು ಬೆಳೆಸಿ

ಫಲವೃಕ್ಷದಂತೆ ಜೀವನವು ಪಸರಿಸಿ ನಿಂದು
ನೆಳಲನೀಯಲಿ ಸಕಲ ಸನ್ಮಾರ್ಗಿಗಳಿಗೆ
ಒಲಿದ ಮನ ಗಳಿಪುದೆಲ್ಲರ ಪ್ರೇಮವಾತ್ಸಲ್ಯ
ಫಲಿಸುವುದು ಶಾಂತಿ ಸುಖ ಸುಕೃತ ಸತತ

ಶುಭವ ಹಾರೈಸುತ್ತ ಸಖ್ಯವನು ಬೆಳೆಸುತ್ತ
ಅಭಯವನು ಹರಡುತ್ತಲಾರ್ತರೊಳು ನಿರುತ
ವಿಬುಧಜನರೊಳು ಬೆರೆತು ವಿಮಲಾತ್ಮನೆನಿಸುತ್ತ
ವಿಭವ ಗಳಿಸೈ ಗೋಪನೊಲುಮೆ ಪಡೆಯುತ್ತ

ಅತಿಶ್ರದ್ಧೆ

ರಾಗ – ಪಂತುವರಾಳಿ
ತಾಳ – ಝಂಪೆ

ಅತಿಯಾಗಿ ಯಾವುದನು ಕಟ್ಟಿಕೊಂಡಿರಬೇಡ
ಅತಿಶ್ರದ್ಧೆ ತಂದೊಡ್ಡುವುದೊ ದುಗುಡ ಕೊನೆಗೆ
ಮಿತವಿರಲಿ ನಿನ್ನ ವ್ಯವಹಾರದೊಳು ಬಾಳಿನೊಳು
ಧೃತಿಗೆಡದೆ ನೀನಡೆದು ಸುಖವ ಗಳಿಸಯ್ಯ

ಆವುದೋ ಕೆಲಸದಲಿ ಮೀರಿ ಶ್ರದ್ಧೆಯ ತೋರಿ
ಜೀವನದ ದಿಟವಾದ ಗುರಿಯದೇನೆಂದು
ಭಾವಿಸದೆ ಹಗಲಿರಳು ದುಡಿದುದರ ಫಲವೇನು
ಜೀವಸವು ತಾನೊಂದೆ ಮನಸು ಕಹಿ ಕಹಿಯು

ಸುತ್ತಮುತ್ತಲ ಜನರ ಕಷ್ಟ ಕಾರ್ಪಣ್ಯವನು
ಹೊತ್ತವನು ನೀನೆಂದು ಶ್ರಮಿಸುತ್ತಲಿರಲು
ಇತ್ತ ಹಾಸಿಗೆ ಹಿಡಿಯೆ ಎತ್ತಿ ಸಲಹಿದರಾರು
ಹೆತ್ತತಾಯಿಯು ಮತ್ತೆ ಕೈಹಿಡಿದ ಸತಿಯು

ಅತಿದಾನದಿಂದ ಹತನಾದನಂಗಾಧಿಪತಿ
ಅತಿಮಾನ ಛಲದಿಂದ ಕೌರವೇಂದ್ರ
ಅತಿಕಾಮದಲಿ ನಾಶಹೊಂದಿದನು ದಶಶಿರನು
ಅತಿಯಾದ ಯಾವುದೂ ಸುಖವ ತರಲಿಲ್ಲ

ಶ್ರದ್ಧೆಯನು ನೀ ತೋರು ನಿನ್ನ ಕಾರ್ಯಂಗಳಲಿ
ಶ್ರದ್ಧೆಯತಿಯಾಗದೆಯೆ ಸಮರಸವು ಬೆರೆತು
ವೃದ್ಧಿಗೊಳ್ಳಲಿ ಚಿತ್ತ ನಿಷ್ಕಾಮಕರ್ಮದಲಿ
ಸಿದ್ಧಿಸಲಿ ಶಾಂತಿ ಶ್ರೀ ಗೋಪಕೃಪೆ ಸಲಲಿ

ಚಿಂತೆ - ಚಿಂತನೆ

ರಾಗ – ಪಂತುವರಾಳಿ
ತಾಳ – ಝಂಪೆ

ಚಿಂತೆಯನು ತೊಡೆಯುತ್ತ ಚಿಂತನೆಯ ನಡೆಸುತ್ತ
ಅಂತರಂಗವ ಶುದ್ಧಿಗೊಳಿಸಿ ಸದ್ಗತಿ ಗಳಿಸೊ

ಚಿಂತೆ ಮನುಜನ ದೇಹಬಲವ ಕುಗ್ಗಿಪುದಯ್ಯ
ಚಿಂತೆಯೊಳು ಮನವುಗುಳು ಸೊರಗಿ ಬಾಡುವುದೊ
ಚಿಂತೆಯನು ಹೊರದೂಡಿ ಚಿತ್ತದಾರ್ಢ್ಯವ ಪಡೆಯೆ
ಸಂತಸದೊಳರಳುವುದೊ ಮನ ತೇಜಗೊಂಡು

ಚಿಂತನೆಯು ನಡೆದಿರಲಿ ಮನದೊಳೆಡೆಬಿಡದೆಯೆ ನಿ-
ರಂತರವು ಸದ್ಭಾವ ಸ್ಫುರಿಸುತಿರಲಿ
ಮಂತು ಮಜ್ಜಿಗೆ ಕಡೆಯೆ ಬೆಣ್ಣೆ ಮೇಲೆದ್ದುಬರು-
ವಂತೆ ಆನಂದ ನಿನ್ನಲಿ ಮೂಡಿ ಬರಲಿ

ಜೀವನದೊಳೇರಿಳಿತವಿಲ್ಲದೊಂದೆಡೆಯಿಲ್ಲ
ಸಾವು ನೋವೆಲ್ಲರೊಳು ಸಂಭವಿಪುದೊ
ಯಾವುದನು ಲೆಕ್ಕಿಸದೆ ಋಜುಮಾರ್ಗದಲಿ ನಡೆಯೆ
ಕಾವನೈ ಗೋಪಯ್ಯ ಚಿಂತೆಯೇಕಯ್ಯ

ಯಾಚನೆ

ರಾಗ – ಸಾರಂಗ
ತಾಳ – ಝಂಪೆ

ಬೇಡುವೊಡೆ ನೀ ಬೇಡು ಜಗದೊಡೆಯ ಶ್ರೀನಿಧಿಯ
ನೀಡುವನು ನಿನಗೆ ನಿಜ ಸಂಪದಭ್ಯುದಯ

ಬೇಡದಿರು ಧನಿಕರೆಂದೆಣಿಸಿ ಮೆರೆಯುವ ಜನರ
ಬೇಡವೈ ನಿನಗೆ ಯಾಚಿಪ ಚಿತ್ತವೃತ್ತಿ

ಮಾನವನನನುಸರಿಸಿ ಯಾಚನೆಯ ನೀ ಗೈಯೆ
ಕಾಣುವನು ನಿಕೃಷ್ಟನೆಂದು ನಿನ್ನ
ದಾನಿಯೆಂದೆನಿಸಿಕೊಳೆ ಭಿಕ್ಷೆನೀಡುವನಯ್ಯ
ಗಾಣದೆತ್ತನು ಸುತ್ತಿಸುವ ತೆರದೊಳಲೆಸಿ

ಮಾರುದ್ದ ದೇಹವನು ಗೇಣುದ್ದಗೈದು ನೀ
ದಾರಿಯಲಿ ನಿಂತೇಕೆ ಧನಿಕನಿಗೆ ಮಣಿವೆ
ನೇರಾಗಿ ಶ್ರೀನಿಧಿಯನರ್ತಿಯಲಿ ಪ್ರಾರ್ಥಿಸಲು
ಪಾರುಗಾಣಿಪ ನಿನ್ನ ಕಷ್ಟಗಳನೆಲ್ಲ

ಸೃಷ್ಟಿಸಿದ ದೇವ ತಾ ಹೊಟ್ಟೆಗೊದಗಿಸದಿಹನೆ
ಇಷ್ಟು ಅತ್ತರು ಸಾಕು ತಾಯೆತ್ತಿಕೊಳಳೆ
ಇಟ್ಟು ಮನವನು ಶ್ರೀನಿವಾಸನಲಿ ಮೊರೆಯಿಡಲು
ಇಷ್ಟಾರ್ಥ ಸಲ್ಲಿಸುವನದಕೆ ಸಂಶಯವೆ

ಬೇಡುವೊಡೆ ನೀ ಬೇಡು ಶಾಶ್ವತದ ಸಂಪದವ
ಬೇಡದಿರು ಕನಸಿನಂದದ ಕ್ಷಣಿಕ ಸುಖವ
ನೋಡಿಳೆಯ ಭೋಗಗಳೊಳಾವುವೂ ಸ್ಥಿರವಲ್ಲ
ಬೇಡು ಗೋಪನ ಸಚ್ಚಿದಾನಂದಮಧುವ

ನಂಬಿಕೆ

ರಾಗ – ಹಿಂದೋಳ
ತಾಳ – ಝಂಪೆ

ನಂಬಿದವರನು ದೇವನೆಂದಿಗೂ ಕೈಬಿಡನೊ
ತುಂಬಿ ಧೈರ್ಯವ ತಾನೆ ಮುಂದೆ ನಡೆಸುವನೊ

ಕಷ್ಟದಲಿ ಸುಖದಲ್ಲಿ ಸಂದಿಗ್ಧ ಸಮಯದಲಿ
ನಿಷ್ಠೆಯಿಂದಲಿ ಹರಿಯ ನಂಬಿ ಸೇವಿಸಲು
ಕಷ್ಟಗಳ ಕಡೆಹಾಯ್ಸಿ ನಿರ್ದಿಷ್ಟ ಗುರಿ ತೋರಿ
ಇಷ್ಟಾರ್ಥ ಸಲ್ಲಿಸುವನದಕೆ ಸಂಶಯವಿಲ್ಲ

ಭಾರತದಿ ಪಾಂಡವರ ಬೆನ್ನಿನಲಿ ತಾ ನಿಂತು
ನೂರಾರು ಸಮಯದಲಿ ಧೈರ್ಯ ತುಂಬಿ
ಪಾರುಗೊಳಿಸಿದ ಯುದ್ಧರಂಗದಲಿ ಗೀತೆಯನು
ಸಾರಿ ತೋರಿದನಿಳೆಗೆ ನಂಬಿದರ ಬಿಡೆನೆಂದು

ಎಲ್ಲ ದೇಶಂಗಳೊಳಗೆಲ್ಲ ಕಾಲದೊಳು
ಎಲ್ಲ ಧರ್ಮಂಗಳೊಳಗೆಲ್ಲ ಶಾಸ್ತ್ರದೊಳು
ಬಲ್ಲವರು ನುಡಿದಿಹರು ನಂಬಿದರನೆಡೆಬಿಡನು
ಎಲ್ಲರನು ಸಲಹುವನು ನಂಬಿ ಬಾಳೆಂದು

ಎನ್ನ ಜೀವನದಲ್ಲಿ ಕಷ್ಟದಲಿ ಸುಖದಲ್ಲಿ
ಸನ್ನುತನ ನೆರೆನಂಬಿ ನಡೆದು ಬಂದಿರಲು
ಎನ್ನ ನೆರವಿಗೆ ನಿಂತು ಬಾಳ ಬೆಳಗಿಸಿದಾತ
ನಿನ್ನನೂ ಸಲಹುವನೊ ಗೋಪ ನಂಬಯ್ಯ

ಕ್ಷಮೆ

ರಾಗ – ಧನ್ಯಾಸಿ
ತಾಳ – ತಿಶ್ರರೂಪಕ

ಕ್ಷಮೆ, ಎಮ್ಮ ಮನವನ್ನೆ ಮನೆಮಾಡಿ ನಿಲು ತಾಯೆ
ಶಮನಗೊಳಿಸುತ ಕೋಪದಾವೇಗಗಳನು

ಅಂದು ಋಷಿವರರೆಲ್ಲ ನಿನ್ನಿಂದ ಧನ್ಯತೆಗೆ
ಸಂದರಲೆ ಜೀವನದಿ ಶಾಂತಿ ಗಳಿಸಿ
ಮಂದಭಾಗ್ಯರ ಪೊರೆಯೆ ಮೈದೋರುತೈತಂದೆ
ಇಂದೆಮ್ಮ ಮನದಲ್ಲಿ ನಿಂತು ಕಾಯೆ

ಅಮಿತ ಕಾರ್ಯಂಗಳೊಳಗನಿರೀಕ್ಷಿತೋದ್ವೇಗ
ಕ್ರಮಗೆಡಿಸಿ ಚಿತ್ತವನು ಕದಡುವಂದು
ಕ್ಷಮೆ, ನಿನ್ನ ನೆರವಿಂದಲೆಲ್ಲರಂತಃಕರಣ
ವಿಮಲಗೊಳ್ಳಲಿ ಪ್ರೇಮ ಬೆಳಸಿ ತಾಯೆ

ಜಗದೊಳೆಲ್ಲರ ಹಿತವ ಸಾಧಿಸಲು ಸಹಕರಿಸಿ
ಪ್ರಗತಿಮಾರ್ಗದಿ ನಡೆಯೆ ಸುಗಮಗೊಳಿಸಿ
ಮಿಗಿಲಿನುತ್ಸಾಹದೊಳಗಾನಂದ ಸಂಪದವು
ಸಿಗುವಂತೆ ಗೋಪನಿಗೆ ಶಾಂತಿ ತಂದೀಯೆ

ಪದವಿ

ರಾಗ– ಸಾವೇರಿ
ತಾಳ– ಝಂಪೆ

ಎರಡು ದಿನದೀಭೋಗಕೇಕೆ ಹಿಗ್ಗುವೆ ಮನುಜ
ಸ್ಥಿರವಲ್ಲವೋ ಪದವಿ ಸ್ಥಿರವಲ್ಲವೊ

ಹೊನ್ನು ಹೆಣ್ಣುಽ ಮಣ್ಣು ಕೊನೆಗೆ ಮಣ್ಣಿನ ಪಾಲು
ಚೆನ್ನೆನುವ ಸಂಸಾರ ಬಿಸಿಲ ನೀಹಾರ
ಅಣ್ಣಾವರೆಂದು ನಿನ್ನನು ಕರೆವ ಜನರೆ ಕಡೆ-
ಗಣ್ಣಿಂದ ನೋಡುವರೊ ಪದವಿ ಪೋದೊಡನೆ

ಹತ್ತು ಜನಕಾಗಿ ನೀ ದುಡಿದೆಯೆನೆ ಜನರು ಕೈ-
ಯೆತ್ತಿ ಕೊಂಡಾಡುವರೊ ನಿನ್ನ ಸೇವೆಯನು
ಸ್ವಾರ್ಥತೆಗೆ ಇನಿತಾದರೆಡೆಯ ನೀನಿತ್ತೆಯೆನೆ
ಸತ್ತೆಯೋ ನೀ ತಿಳಿಯೊ ಜನರ ಕಣ್ಣೊಳು

ಅಧಿಕಾರದಲ್ಲಿರಲು ಉಪಕಾರವನು ಮಾಡು
ಬದುಕ ಹುಲುಸಾಗಿಸುವ ದಾರಿ ತೋರು
ಹೃದಯಶುದ್ಧಿಯು ಆಗೆ ತನು ತಾನೆ ಬೆಳಗುವುದು
ಸದಯ ಗೋಪನ ಕೃಪೆಯು ನಿನಗಪ್ಪುದು

ಮೊರೆ

ರಾಗ – ಆನಂದ ಭೈರವಿ
ತಾಳ – ಝಂಪೆ

ದೀನ ರಕ್ಷಕ ಭಾನುಕೋಟಿ ಪ್ರಕಾಶ
ನೀನೆ ಎಲ್ಲರ ನಡೆಸಿ ಸಲಹಬೇಕಯ್ಯ

ನಾವರಿಯದಂತೆನಿತು ಇರುವೆಗಳ ತುಳಿಯುವೆವೊ
ಜೀವ ಜಂತುಗಳನ್ನು ಹಿಂಸಿಸುತ್ತಿಹೆವೊ
ಆವಾವ ಕಾರ್ಯದೊಳಗಾರ ಮನ ನೋಯಿಪೆವೊ
ದೇವ ನೀನೆಚ್ಚರಿಸಿ ನಡೆಸಬೇಕಯ್ಯ

ಧ್ಯೇಯವೊಂದನು ಹಿಡಿದು ಕಾರ್ಯ ಸಾಧಿಪೆವೆನಲು
ನ್ಯಾಯದೆಲ್ಲಿಯನೆಲ್ಲಿ ಮೆಟ್ಟಿ ಹೊರಳುವೆವೊ
ಮಾಯೆಯೆಮ್ಮನು ಮುಸುಕೆ ಮದಿಸಿ ಮುಗ್ಗರಿಸುವೆವೊ
ಜೀಯ ನೀನೆಲ್ಲರನು ಎತ್ತಿ ಸಲಹಯ್ಯ

ಮಾನವರ ಬುದ್ಧಿ ಪ್ರಚೋದನೆಗು ಮಿತಿಯಿಹುದೊ
ಜ್ಞಾನಿಗಳು ನಾವೆನಲು ಎಡವುತಿಹೆವೊ
ದೀನತೆಯ ಕಂಡು ನೆರೆ ನಂಬಿ ನಡೆದಿಹೆವಯ್ಯ
ಭಾನುತೇಜೋಮೂರ್ತಿ ಸಲಹೊ ಗೋಪಯ್ಯ

ರಂಗಮಂಟಪ

ರಾಗ – ಸಾರಂಗ
ತಾಳ – ಝಂಪೆ

ಜೀವನದ ರಂಗದೊಳು ವಿವಿಧ ವೇಷಂಗಳೊಳು
ನಾವಿಂದು ನಾಟಕವನಭಿನಯಿಸುತಿಹೆವು

ಅಂದಿನಾಪುರಜನರೆ ಇಂದು ಮಂತ್ರಿಗಳೆನಿಸಿ
ಹಿಂದಿದ್ದ ಸೇವಕರೆ ಅಧಿಕಾರ ವಹಿಸಿ
ಒಂದೊಂದು ಪಾತ್ರವನ್ನೋರೋರ್ವರಳವಡಿಸಿ–
ಕೊಂಡು ರಾಜ್ಯಾಡಳಿತ ನಡೆಸುತಿಹೆವು

ರಂಗಮಂಟಪದಲ್ಲಿ ಕಾಲ್ಗೆಜ್ಜೆಯನು ಕಟ್ಟಿ
ಅಂಗವಿನ್ಯಾಸಗೊಳೆ ತಾಳ ಲಯ ಬೇಕು
ಸಂಗಡಿಗರಲ್ಲಿ ವೈರಸ್ಯ ಮೂಡಲು ಶ್ರುತಿಗೆ
ಭಂಗ ಬರುವುದೊ ತಾಳ ಹಿಂಗುತಿಹುದೊ

ನಟನೆ ಜನರಂಜನೆಯ ಗೈಯದಿರೆ ನೋಟಕರು
ದಿಟದಿ ಬೊಬ್ಬೆಯನಿಟ್ಟು ಕೆಳಗಿಳಿಪರು
ನಟ ಸ್ವಾರ್ಥತೆಯ ತೊರೆದು ನೈಜದಿಂದಭಿನಯಿಸೆ
ಕಟು ಟೀಕೆ ಕೊನೆಗಂಡು ಕೀರ್ತಿ ಹರಡುವುದು

ಎಲ್ಲ ನಾಟಕ ಸೂತ್ರಧಾರಿ ಶ್ರೀಗೋಪನೆಂ–
ದೆಲ್ಲ ನಟರವನ ನೆರೆನಂಬಿ ನರ್ತಿಸಲು
ಬಲ್ಲವರು ಗಾವಿಲರು ಎಲ್ಲರೂ ಮೆಚ್ಚುವರು
ಸಲ್ಲುವುದು ಶ್ರೇಯಸ್ಸು ಶಾಂತಿ ನೆಲಸುವುದು

ಸ್ನೇಹ

ರಾಗ – ಷಣ್ಮುಖಪ್ರಿಯ
ತಾಳ – ಝಂಪೆ

ಸ್ನೇಹ ಸಂಪಾದಿಸಲು ಬೇಕಣ್ಣ, ಜಗದಾ
ಪ್ರೇಮವನು ಗಳಿಸಿ ನೀ ಶಾಂತಿ ಪಡೆಯಣ್ಣ

ಸ್ನೇಹ ಬೆಳೆಯಲು ಪ್ರೇಮ ಪ್ರೇಮ ನೆಲಿಸಲು ಶಾಂತಿ
ಶಾಂತಿ ದೊರಕಲು ಸೌಖ್ಯ ಬಾಳು ಬೆಳಕಣ್ಣ

ದಯೆಯು ದುರ್ಬಲರಲ್ಲಿ ತೋರಣ್ಣ, ಭೂತ-
ದಯೆಯು ನಿನ್ನಲಿ ಹೆಚ್ಚುಗೊಳಲಣ್ಣ
ಖಗಮೃಗವು ಜಲಚರವು ಎಲ್ಲ ಜೀವಿಗಳಲ್ಲಿ
ಬಗೆದು ವಾತ್ಸಲ್ಯವನು ವಿಶ್ವಾಸ ಗಳಿಸಣ್ಣ

ಧರ್ಮಮಾರ್ಗವ ನೀನು ಹಿಡಿಯಣ್ಣ, ನಿತ್ಯ-
ಕರ್ಮವನೆಸಗುತ್ತ ನಡೆಯಣ್ಣ
ನಿಷ್ಕಾಮಕರ್ಮದೊಳು ಮನವ ಪ್ರಚೋದಿಸುತ
ಸತ್ಕಾರ್ಯಗೈಯುತ್ತ ಸುಕೃತವ ಗಳಿಸಣ್ಣ

ಜಗದಾದ್ಯ ಗೋಪನ ನಂಬಣ್ಣ, ಬಾಳು
ಸುಗಮವಪ್ಪುದು ನೀನು ತಿಳಿಯಣ್ಣ
ನಿರ್ಮಲಾಂತಃಕರಣ ವಿಶ್ವಪ್ರೇಮವ ಬೆಳೆಸಿ
ಆತ್ಮ ಪಾವನಗೊಳಿಸಿ ಆನಂದ ಗಳಿಸಣ್ಣ

ಅರಿವು

ರಾಗ – ಪಂತುವರಾಳಿ
ತಾಳ – ಝಂಪೆ

ತನ್ನ ತಾನರಿಯಬೇಕಣ್ಣ
ತನ್ನ ಶಕುತಿಯನರಿತು ರೂಪಿಸೈ ಬದುಕಣ್ಣ

ತನ್ನ ದೇಹದೊಳಿರುವ ಪಿತ್ತಕೋಶವೆ ಜಠರ
ಇನ್ನಿತರ ಅವಯವಗಳೆಲ್ಲದರ ಮಿತಿಯ
ಚೆನ್ನಾಗಿ ತಾನರಿತು ಜೀವನವ ಮಾರ್ಪಡಿಸಿ
ಅನ್ನ ಆಹಾರದೊಳು ನಿಯಮ ತರಬೇಕಣ್ಣ

ತನ್ನ ಬುದ್ಧಿಯ ಶಕ್ತಿ ಇನ್ನು ಜ್ಞಾಪಕಶಕ್ತಿ
ಮುನ್ನ ತಾನರಿತು ಅದರಂತೆ ನಡೆದು
ನಿನ್ನ ಕೈಗೆಟುಕದುದಕನ್ಯಥಾ ಚಿಂತಿಸದೆ
ನಿನ್ನಲ್ಲಿ ತೃಪ್ತಿಯನು ತಂದು ನಡೆಯಣ್ಣ.

ಒಬ್ಬೊಬ್ಬರಿದ್ದಂತೆ ಇನ್ನೊಬ್ಬರಿಲ್ಲಣ್ಣ
ಒಬ್ಬರಾಹಾರವಿನ್ನೊಬ್ಬರಿಗೆ ವಿಷವಣ್ಣ
ಒಬ್ಬೊಬ್ಬರೂ ತಮ್ಮನರಿತು ಬಾಳ್ ನಡೆಸಿದರೆ
ಹಬ್ಬ ಕಾಣಣ್ಣ ಕೃಪೆಗೈವ ಗೋಪಣ್ಣ

ಎಚ್ಚರಿಕೆ

ರಾಗ – ಷಂತುವರಾಳಿ
ತಾಳ – ಝಂಪೆ

ಆದುದಾಯಿತು ಅದಕೆ ದುಗುಡಪಡಲೇಕೆ
ಆದುದೆಲ್ಲವು ನಿನ್ನ ಹಿತಕೆ ಎಚ್ಚರಿಕೆ

ಜಗದೊಳೆಲ್ಲರ ನಂಬಿ ಮೋಸಹೋಗಲು ಬೇಡ
ಹೊಗಳುವರ ಹತ್ತಿರಕೆ ಸುಳಿಸಬೇಡ
ನಗುತ ಬೆನ್ನೊಳು ಇರಿವ ನೇಹಿಗರ ಜೊತೆಬೇಡ
ಸೊಗಸುಗಾರ್ತಿಯರೊಡನೆ ಸಲ್ಲಾಪ ಬೇಡ

ನಿನ್ನ ಬುದ್ಧಿಯು ನಿರುತ ನಿನ್ನ ಕೈಯೊಳಗಿರಲಿ
ಅನ್ಯರಾಶ್ರಯಕಿನಿತು ಹಂಬಲಿಸದಿರಲಿ
ಉನ್ನತಾದರ್ಶವಿರಲಯ್ಯ ಜೀವನದಲ್ಲಿ
ಮಾನ್ಯತೆಯ ಪಡೆಯಲಿ ಮಧುರ ಭಾವನೆಯಲಿ

ಅದು ಇದೂ ಯಾವುದೂ ಯಾರ ಕೈಯೊಳಗಿಲ್ಲ
ಅದು ಇದರ ಯತ್ನವೆಲ್ಲರೊಳು ಇಹುದೊ
ಅದರ ಫಲ ಬಯಸದೆಯೆ ಹಿಡಿದು ದುಡಿದಂತೆಲ್ಲ
ಬದುಕು ಹುಲುಸಾಗುವುದೊ ಫಲವು ಫಲಿಸುವುದೊ

ಇದನೆ ಗೋಪನು ನಿತ್ಯ ನಿನಗೆ ತೋರುತಲಿಹನೊ
ಹದಗೊಳಿಸು ನಿನ್ನ ಮನವೆಂದೆಂಬನೊ
ಪದವಿ ಸಂಪದ ಕೀರ್ತಿಯೊಡನೆ ಬರಲಿ ವಿರಕ್ತಿ
ಹೃದಯಶುದ್ಧತೆಯೊಡನೆ ನಿಲಲಿ ನಿಜಭಕ್ತಿ

ನಾಯಕನ ಗುಣ

ರಾಗ– ಭಾಗೇಶ್ವರಿ
ತಾಳ– ತಿಶ್ರಛಾಪು

ನಾಯಕನೊಳಿರಬೇಕು ನಾಲ್ಕು ಸದ್ಗುಣಗಳು
ನ್ಯಾಯಶೀಲತೆ ವಿನಯ ಗಾಂಭೀರ್ಯ ಧೃತಿಯು
ಇವ ನಾಲ್ಕನೊಡಗೊಂಡು ಜನಸೇವೆ ಕೈಕೊಂಡು
ಶಿವನಲ್ಲಿ ನಿಜಭಕ್ತಿ ನಿಲಿಸಿ ನಡೆಯಲಿಬೇಕು

ಒಡಹುಟ್ಟಿದವನೆಂಬ ಮಮತೆ ಹೊರಗಿಡಬೇಕು
ಮಡದಿ ಮಕ್ಕಳು ಎಂಬ ಮೋಹ ಬಿಡಬೇಕು
ಬಡವ ಬಲ್ಲಿದರೆನದೆ ನ್ಯಾಯ ಸಲ್ಲಿಸಬೇಕು
ಕಡು ನಿಷ್ಠೆಯಿಂದ ಜೀವನ ನಡೆಸಬೇಕು

ಎಲ್ಲ ಜನರೊಳು ವಿನಯದಿಂದ ವರ್ತಿಸಬೇಕು
ಎಲ್ಲರೊಳು ಸಮರಸವ ಬೆರಸಬೇಕು
ಬಲ್ಲವರು ಗಾವಿಲರು ಎಂಬ ಭೇದವ ತೊರೆದು
ಎಲ್ಲರಿಂ ವಿಶ್ವಾಸ ಗಳಿಸಬೇಕು

ಸ್ಮಿತವದನನಾಗಿ ಸಂತಸವ ಹರಿಸಲು ಬೇಕು
ಸತತ ಸಂಪ್ರೀತಿ ಗಾಂಭೀರ್ಯವಿರಬೇಕು
ಮಿತಭಾಷಿಯಾಗಿ ಎಲ್ಲರನಾಲಿಸಲು ಬೇಕು
ಹಿತ ಬಯಸುತೆಲ್ಲರನ್ನೊಲಿಸಿಕೊಳಬೇಕು

ಎದೆಗಾರಿಕೆಯು ಹುಟ್ಟುಗುಣವಾಗಿ ಬರಬೇಕು
ಹಿಡಿದ ಕಾರ್ಯವ ಬಿಡದೆ ನಡೆಪ ಧೃತಿ ಬೇಕು
ಹೃದಯದಲಿ ಗೋಪನನು ನಿಲಿಸಿಕೊಂಡಿರಬೇಕು
ಎಡೆಬಿಡದ ಸೇವಾಮನೋವೃತ್ತಿ ಬೇಕು

ಸೋತು ಗೆದ್ದರು

ರಾಗ – ನಾಟಕುರಂಜಿ
ತಾಳ – ಆದಿ

ಸೋತು ಗೆದ್ದರಯ್ಯ ಸಜ್ಜನ
ಸೋತು ಗೆದ್ದರಯ್ಯ
ಬರಿಯ ಛಲವ ಹಿಡಿದು ನಿಲದೆ
ಹಿರಿಯತನವ ತೋರಿ ನಡೆದು

ಸುಂಟರೆಲರು ಸುಳಿದುಬರಲು
ಅಂಟಿ ನೆಲವನರಿತ ಜನರು
ತುಂಟನಾರ್ಭಟಂಗಳಳಿಯೆ
ಸೊಂಟವೆತ್ತಿ ನಿಂತ ತೆರದಿ

ಬದ್ಧದ್ವೇಷ ವಿಷವ ಕರೆವ
ಕ್ಷುದ್ರ ಸನ್ನಿವೇಶಗಳಲಿ
ಬುದ್ಧಿಯುತರು ಭದ್ರಗೊಂಡು
ರೌದ್ರವಳಿಯಲೆದ್ದ ತೆರದಿ

ಭೌತಶಕ್ತಿಗಿಂತ ಮಿಗಿಲು
ಆತ್ಮಶಕ್ತಿಯೆಂದು ತಿಳಿದು
ಭೂತಗಣಗಳೊಡನೆ ಶ್ರಮಿಸು-
ತಾತ್ಮ ತೇಜವಳಿಯಗೊಡದೆ

ಪರಂಜ್ಯೋತಿ ಪ್ರಭೆಯನರಸಿ
ಧರೆಯ ಸುಖದ ಕರೆಯ ಜಯಿಸಿ
ನಿರುತ ಗೋಪನೊಲುಮೆ ಬಯಸಿ
ಪರಮ ಸುಕೃತ ಪಡೆದರಯ್ಯ

ಗೀತಗಳು

ಭಾಗ ೩

ಪರಿವಿಡಿ

ಆದಿತ್ಯದೇವ

ರಾಗ – ಭೂಪಾಳಿ
ತಾಳ – ಆದಿ

ಮೂಡಣ ದಿಶೆಯೊಳು ಮಂಗಳದೋಕುಳಿ
ಚೆಲ್ಲೆ ಉಷೆಯು ಮಿಂದು
ಮೂಡಿ ಬಂದಳು ಒಸಗೆ ತಂದಳು
ಭಾನು ಬರುವನೆಂದು
ಬಾನು ಬೆಳಗಿತು ತಿರೆಯು ಮೆರೆಯಿತು
ಅರುಣ ಕಿರಣ ಕಂಡು
ಮೌನ ಮುರಿಯಿತು ಚಲನೆ ಮರಳಿತು
ಜಗವೆ ತೇಜಗೊಂಡು
ಮಂಜುಹನಿ ಮುಡಿದ ತಳಿರ ಸಿಂಗರದ
ಲತೆಯು ಗಿಡವು ಮರವು
ರಂಜಿಸಿದವು ದಿನಕರನ ಕರಗಳಿಂ
ಸಕಲ ಚರಾಚರವು

ರಾಗ – ಬಿಲಹರಿ
ತಾಳ – ಆದಿ

ಖಗ ಮೃಗ ಸಂಕುಲ ಕಲರವಗೈಯುತೆ
ಸ್ವಾಗತಿಸಲು ಸೂರ್ಯ
ಮುಗಿಲಿನ ಚೆಲುವಿನ ಮೂಡಲ ಕಡಲಿಂ-
ದೆದ್ದು ಬಂದನಾರ್ಯ

ಕೆಂಪಗೆ ದುಂಡಗೆ ಜ್ವಲಿಸುತಲಾರವಿ
ನಭದಿ ಮೇಲಕೇರೆ
ಸಂಪದವೇರಿತು ಜೀವಕೋಟಿಗಾ-
ನಂದ ಮೀರಿ ತೋರೆ
ಹಿರಣ್ಯಗರ್ಭನ ಮರೀಚಿಯೊಳಗಿನ
ಅಮಿತ ದಿವ್ಯಶಕ್ತಿ
ಹರಿಯುತೊಡಗಿತ್ತೈ ಚೇತ ಚೇತನಕು
ತನ್ನ ತನ್ನ ಶಕ್ತಿ

ರಾಗ – ಧನ್ಯಾಸಿ
ತಾಳ – ಆದಿ

ಪ್ರಾಣ ಪೋಷಕನೆ ಜ್ಞಾನ ದೀಪಕನೆ
ವೇದಪುರುಷ ವಿಭುವೆ
ನಿನ್ನ ಆಗಮನದಿಂದಲೆನ್ನ ಮನ
ಅಮಲಗೊಂಡಿತಿದುವೆ
ಯಾಜ್ಞವಲ್ಕ್ಯರಿಂದಾರಾಧಿತ ಆ-
ದಿತ್ಯ ಹೃದಯದೇವ
ಪ್ರಾಜ್ಞನಾಗಿಸೆನ್ನಾತ್ಮ ಬೆಳಗಿಸೈ
ತಮೋಹರಣ ಕಾವ
ನಮೋ ಬ್ರಹ್ಮನೇ ನಮೋ ರುದ್ರನೇ
ನಮೋ ವಿಷ್ಣುರೂಪ
ನಮೋ ನಿತ್ಯನೇ ನಮಸ್ಸತ್ಯನೆ
ನಮಿಪೆ ನಿನ್ನ ಗೋಪ

ಅರ್ಚನೆ

ರಾಗ – ಯದುಕುಲ ಕಾಂಭೋಜ
ತಾಳ – ಝಂಪೆ

ಎಂತು ನಿನ್ನನು ನಾನು ಭಾವಿಸಲಿ ರೂಪಿಸಲಿ
ಎಂತು ಧ್ಯಾನದಿ ನಿನ್ನ ನಿಲಿಸಿಕೊಳಲಿ

ಚಿಂತೆ ಹಲವಾದ ಸುಖಲಾಲಸೆಯ ಬದಿಗೊತ್ತಿ
ಎಂತು ದೃಢಚಿತ್ತದಲಿ ಪೂಜೆ ಸಲ್ಲಿಸಲಿ

ಜ್ಞಾನಿಗಳ ಚಿಂತನೆಗೆ ನಿರ್ಗುಣ ನಿರಾಕಾರ
ಧ್ಯಾನಿಪರ ದೃಢಮನಕೆ ಸಗುಣ ಸಾಕಾರ
ನೀರು ಮಂಜಿನ ಗಡ್ಡೆಯಾದಂತೆ ತೇಜವಾ –
ಕಾರ ತಳೆದಿದೆ ಅವರ ಧ್ಯಾನ ಶೈತ್ಯದಲಿ

ಅವರವರ ಭಾವನೆಗೆ ಅವರವರ ನಿಲುಗಡೆಗೆ
ಅವರ ಚೇತನದಂತೆ ರೂಪವಾಂತೆ
ಅವರವರ ಭಕ್ತಿಯಾರಾಧನೆಯನಾದರಿಸಿ
ಅವರ ಬಾಳನು ಬೆಳಗಿ ಶಾಂತಿ ದೊರಕಿಸಿದೆ

ಎನ್ನ ಚೇತನವಿನ್ನು ಚಿಗರೆಯೆಳಮರಿಯಂತೆ
ಬನ್ನಪಡುತಿದೆ ಸಿಲುಕಿ ಸಂಶಯದ ಬಲೆಗೆ
ಸನ್ನುತನೆ ನೀನೆನಗೆ ಚಿತ್ತದಾರ್ಢ್ಯವನಿತ್ತು
ನಿನ್ನಡಿಯ ಮೂಲದಲಿ ನಿಲಿಸೊ ಗೊಪಯ್ಯ

ಪುರುಷ ಪ್ರಯತ್ನ

ರಾಗ – ಅಠಾಣ
ತಾಳ – ಝಂಪೆ

ಬರಿಯ ಚಿಂತನೆಯಿಂದ ಫಲವೆಂತು ದೊರೆಯುವುದೊ
ಪುರುಷ ಪ್ರಯತ್ನವದರೊಂದಿಗಿರದೆ

ಮಾವಿನಾಮರದಡಿಯೊಳದರ ಫಲವನು ಬಯಸಿ
ಆಲೋಚಿಸುತ್ತಿರಲು ಫಲದೊರೆಯದೋ
ದೇವ ನಮಗಿತ್ತಿರುವ ಸಾಮರ್ಥ್ಯವನು ಬಳಸಿ
ಮೇಲಕ್ಕೆ ಕಲ್ಲೆಸೆಯಲಾಗ ಫಲ ದೊರೆಯುವುದೋ

ತರ್ಕದಲಿ ಜನತೊಡಗಿ ಚರ್ಚೆಯನು ಗೈಯಲೊಣ-
ತರ್ಕಕ್ಕೆ ಸಿಗನೊ ಚೈತನ್ಯರೂಪ
ಕರ್ಮವನು ಕೈಕೊಂಡು ಧರ್ಮದಲಿ ನಡೆಯೆ ಸ-
ತ್ಕರ್ಮಫಲ ಸಿದ್ಧಿಸುವುದದಕೆ ಸಂಶಯವಿಲ್ಲ

ಅವರವರ ಧರ್ಮದಲಿ ಕರ್ಮವನ್ನೆಸಗುತಲಿ
ಅವರ ಆತ್ಮೋನ್ನತಿಯನವರೆ ಸಾಧಿಸಲಿ
ಶಿವನ ಸಂಕಲ್ಪದಲಿ ಪುರುಷ ಪ್ರಯತ್ನದಲಿ
ಅವರವರ ಬಾಳ್ ಬೆಳಗಿ ಗೋಪನೊಲಿದಿರಲಿ

ಸರ್ವೇಶ

ರಾಗ – ಆಭೋಗಿ
ತಾಳ – ತಿಶ್ರರೂಪಕ

ಎಲ್ಲರಾರಾಧಿಸುವ ಸರ್ವೇಶನೊಬ್ಬನೇ
ಅಲ್ಲಾನು ಈಶ್ವರನು ಜ್ಯೂಸ ಜಗದೀಶ
ಸಲ್ಲಿಪರು ಪೂಜೆಯನು ಹಲವಾರು ವಿಧಗಳಲಿ
ನಿಲ್ಲಿಸುತ ಚಿತ್ತವನ್ನಾದಿಶಕ್ತಿಯಲಿ

ಪರಮ ಪಾವನಮೂರ್ತಿ ಪರಂಜ್ಯೋತಿಯು ಅವನೆ
ಹರಿಯವನೆ ಹರನವನೆ ಪರಬ್ರಹ್ಮನೂ
ಕರೆಯುವರೊ ಪರಿಪರಿಯ ನಾಮಗಳೊಳವನನ್ನೆ
ಪುರುಷನೆಂಬರೊ ಪರಾಶಕ್ತಿಯೆನ್ನುವರೊ

ಅಣುರೇಣು ತೃಣಕಾಷ್ಟದೊಳಗವನೆ ನಿಂತಿಹನೊ
ಅಣುವಿನೊಳಗಮಿತ ಶಕ್ತಿಯ ತೋರುತಿಹನೊ
ಕಣ ಕಣಗಳೂ ಚಲಿಸಲವನೆ ಚಾಲಕನಾಗಿ
ಅಣುವಿಂದ ಬ್ರಹ್ಮಾಂಡವೆಲ್ಲ ತುಂಬುವನೊ

ಏಕಾಂತದೊಳು ನಿಂತು ಏಕಾಗ್ರ ಚಿತ್ತದೊಳು
ವ್ಯಾಕುಲತೆಯಿಂದವನ ಕರೆದು ಮೊರೆಯಿಡಲು
ಸಾಕಾರದೊಳು ತಾನೆ ಗೋಚರಿಪನವನಯ್ಯ
ಬೇಕಾದ ಶಾಂತಿಯನ್ನೀವ ಗೋಪಯ್ಯ

ಹಂಬಲು

ರಾಗ– ಮೋಹನ
ತಾಳ– ತಿಶ್ರ ತ್ರಿಪುಟ

ನಿನ್ನ ಕಾಣುವ ಹಂಬಲು ಓ ಜಗದಂಬೆ
ಎನ್ನೊಳುನ್ಮನಗೊಂಡಿದೆ
ತನ್ನ ತಾಯಿಯ ಬಯಸಿ ಶಿಶುವು ಗೋಗರೆವಂತೆ
ನಿನ್ನ ಕಾಣಲು ತಪಿಸಿ ಹಾತೊರೆಯುತಿದೆ ಚಿತ್ತ

ಕಳೆದೆ ನಾನೈವತ್ತು ವರುಷವೀ ಜೀವನದೆ
ಬಳಲಿದೆನು ನಿನ್ನ ನೆಲೆ ಗೋಚರಿಸದೆ
ಎಳಯ ಮಾರ್ಜಾಲಶಿಶು ತಾಯಿಯನು ಕರೆವಂತೆ
ಯೆಳಸಿ ನಿನ್ನನು ನೋಡೆ ಮೊರೆಯಿಡುತ್ತಿರುವೆ

ರಾಮಕೃಷ್ಣರ ತಪೋನಿಷ್ಠೆ ಯೆನ್ನೊಳಗಿಲ್ಲ
ಆ ಮಹಾಸಾಧಕರ ಸಾಧನೆಯು ಇಲ್ಲ
ನೇಮ ಜಪ ತಪವಿಲ್ಲವಾದರೂ ವ್ಯಾಕುಲವು
ಈ ಮನವ ನಿನಗಾಗಿ ತುಂಬಿಹುದು ತಾಯೆ

ಸಾಕಾಯ್ತು ನೀನಿತ್ತ ಗೊಂಬೆಗಜ್ಜುಗದಾಟ
ಬೇಕಾದುದೆನಗಿಂದು ನಿನ್ನ ಕೃಪೆನೋಟ
ಸಾಕಾರದೊಳು ತೋರಿ ವಾತ್ಸಲ್ಯವನು ಬೀರಿ
ಈ ಕುವರ ಗೋಪನನು ಕಾಯೆ ನಿರಪಾಯೆ

ನೃತ್ಯಕಾಳಿ

ರಾಗ– ಕಾಪಿ
ತಾಳ– ಏಕ

ನರ್ತಿಸಿದಳು ಕಾಳಿ, ರೌ-
ದ್ರಾವತಾರ ತಾಳಿ

ಕಾಳಿಯ ಲಯಲೀಲೆಗೆ ಈ
ಸೃಷ್ಟಿ ನೃತ್ಯಶಾಲೆ

ಶಿವನ ದೇಹ ಮೆಟ್ಟಿ, ಭೂ-
ವ್ಯೋಮವನ್ನೆ ಮುಟ್ಟಿ
ಕಾರ ಮುಗಿಲ ಕುರುಳ, ತಾ-
ನೆಲ್ಲ ದೆಸೆಗು ಕವಿಸಿ
ಕಾಲಗೆಜ್ಜೆ ದನಿಗೆ, ಬಿರು-
ಗಾಳಿ ಸಿಡಿಲು ಗುಡುಗೆ
ಕಣ್ಣನೋಟ ಸುಳಿಸಿ, ಸುಳಿ
ಮಿಂಚಿನೆಳೆಯ ಹರಿಸಿ
ಖಡ್ಗ ಕೈಯೊಳಿರಿಸಿ, ತಾ
ರುಂಡಮಾಲೆ ಧರಿಸಿ
ನರ್ತಿಸುತ್ತಲಿರಲು, ಇದೊ
ತತ್ತರಿಸಿತು ಜಗವು

ನೃತ್ಯವಿದನು ನಿಲಿಸೆ, ನೀ
ಸೌಮ್ಯರೂಪ ಧರಿಸೆ
ಮೊಗಕೆ ನಗೆಯ ತಾರೆ, ಸಂ-
ಮೋದವಿಳೆಗೆ ಬೀರೆ
ಜಗನ್ಮಾತೆ ಲಲಿತೆ, ಸತ್
ಚಿದಾನಂದ ಭರಿತೆ
ಕೃಪಾರಸವ ಸುರಿಸೆ, ನೀ-
ನಿಳೆಗೆ ಶಾಂತಿ ಸಲಿಸೆ
ದೇವಿ ಆದಿ ಶಕ್ತಿ ನಾ
ನಿನ್ನೊಳಿರಿಸಿ ಭಕ್ತಿ
ಮಣಿಯುತಿರುವೆ ತಾಯೆ, ಶ್ರೀ
ಗೋಪಸಹಜೆ ಕಾಯೆ

ಗಾಯತ್ರಿ

ರಾಗ – ಪೂರ್ವ ಕಲ್ಯಾಣಿ
ತಾಳ – ತಿಶ್ರರೂಪಕ

ಪಾಹಿಮಾಂ ಗಾಯತ್ರಿ ಪ್ರಣವಸ್ವರೂಪಿಣಿ
ವಿಶ್ವಚೇತನೆ ತಾಯೆ ನಿತ್ಯೆ ನಿರಪಾಯೆ

ಓಂ ಭೂರ್ಭುವಸ್ಸುವಃ ತತ್ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋನಃ ಪ್ರಚೋದಯಾತ್
ಇದೆ ನಿತ್ಯ ಜಪವೆನಗೆ ಓ ಜನನಿ ಕಾಯೆ

ಜೀವನದೊಳಿದ್ದು ಬಹ ತುಮುಲವೆಲ್ಲವ ಗೆಲುವ
ಬ್ರಹ್ಮತೇಜೋಬಲವನುದ್ದೀಪ್ತಗೊಳಿಸಿ
ನಿರ್ಮಲಾಂತಃಕರಣ ವಿಶ್ವಪ್ರೇಮವ ಬೆಳೆಸಿ
ಆತ್ಮ ಪಾವನಗೊಳಿಸಿ ನಡೆಸು ತಾಯೆ

ಸತ್ಯವೇ ಸೌಂದರ್ಯ ಸೌಂದರ್ಯವೇ ಬ್ರಹ್ಮ
ತ್ಯಾಗದೊಳ್ ಬಾಳ್ ನಡೆಸೆ ಸಚ್ಚಿದಾನಂದ
ಮನಸು ಇಂದ್ರಿಯ ಪ್ರಾಣ ಪರಮಾತ್ಮನಲಿ ಲೀನ-
ಗೊಳಿಸೆ ಸಹಕರಿಸೆನ್ನ ಸಲಹು ತಾಯೆ

ಓಜೋಸಿ ಸಹೋಸಿ ಬಲಮಸಿ ಭ್ರಾಜೋಸಿ
ದೇವಾನಾಂ ಧಾಮ ನಾಮಾಸಿ
ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುಃ
ಅಭಿಭೂರೋಂ ಗಾಯತ್ರಿ ಗೋಪ ಹಿತದಾತ್ರಿ

ವೆಂಕಟೇಶ

ರಾಗ – ಕಾಂಭೋಜ
ತಾಳ – ಝಂಪೆ

ಧನ್ಯನಾದೆನೊ ಇಂದು ಕಣ್ಣಾರೆ ನಿನ ಕಂಡು
ಎನ್ನ ಧ್ಯಾನದ ಮೂರ್ತಿ ಶ್ರೀವೆಂಕಟೇಶ

ಏನು ಗಾಂಭೀರ್ಯವೋ ನಿನ್ನ ನಿಲುಭಂಗಿಯಲಿ
ಏನು ಮಂದಸ್ಮಿತವೊ ನಿನ್ನ ವದನದಲಿ
ರಾಜಿಸುತ್ತಿರೆ ಲಕ್ಷ್ಮಿ ನಿನ್ನ ವಕ್ಷಃಸ್ಥಳದಿ
ಮೂಜಗದ ಸಂಪದವ ಕಂಡೆನಿಲ್ಲಿ

ಏಳು ಕೊಂಡದ ಒಡಯ ವೈಕುಂಠನಿಲಯ ಈ-
ರೇಳು ಲೋಕಂಗಳಿಗೆ ತೋರುತಿಹೆ ಕೃಪೆಯ
ಕಾಲಚಕ್ರಕೆ ಸಿಲುಕಿ ಸೊರಗಿರ್ಪ ಈ ಇಳೆಯ
ಪಾಲಿಸೈ ಆಲಿಸುತ ನಿನ್ನವರ ಮೊರೆಯ

ಎನಗಾಗಿ ಏನೊಂದ ನಾ ಬೇಡೆನಯ್ಯ
ಮನೆಮಠವು ಮಕ್ಕಳೈಸಿರಿ ನಿನ್ನದಯ್ಯ
ಅನುವಾಗುತಿರಲೆನಗೆ ಜನಸೇವೆಯಿಳೆಯೊಳಗೆ
ತನುಮನವನಾವರಿಸಿ ದುಡಿಸು ಗೋಪಯ್ಯ

ತ್ಯಾಗರಾಜ

ರಾಗ – ತೋಡಿ
ತಾಳ – ಚತುರಶ್ರರೂಪಕ

ತ್ಯಾಗರಾಜ ನಾದಬ್ರಹ್ಮ
ಭಾಗವತರ ಗುರುವರೇಣ್ಯ
ಬಾಗಿ ನಮಿಸುತಿರುವೆ ವೈ-
ರಾಗ್ಯಮೂರ್ತಿ ರಾಗಋಷಿಯೆ

ತಿರುವಯ್ಯಾರಿನಲ್ಲಿ ನೆಲಸಿ
ಸ್ವರಸಂಗೀತ ಸಿರಿಯ ಗಳಿಸಿ
ಹರಿ ಸಂಕೀರ್ತನೆಯಲಿ ಮನವ-
ನಿರಿಸಿ ಭಕ್ತಿಸುಧೆಯ ಹರಿಸಿದೆ

ಅಮ್ಮ ಸೀತೆ ರಾಮಭದ್ರ
ತಮ್ಮ ಲಕ್ಷ್ಮಣರನು ಒಲಿಸಿ
ರಮ್ಯ ಕೃತಿಗಳನ್ನು ರಚಿಸಿ
ಕರ್ಮಸವೆಸಿ ಮೋಕ್ಷಗಳಿಸಿದೆ

ಮುನ್ನಿನೊಂದು ಪುಣ್ಯದಿಂದ
ಸನ್ನುತರ್ಗೆ ಕರುಣೆದೋರ್ಪ
ನಿನ್ನ ಸಾನ್ನಿಧ್ಯಕೈದಿ
ಧನ್ಯನಾದ ಗೋಪನಿಂದು

ಶಿವಕಾಮಿ

ರಾಗ – ಬೇಹಾಗ್
ತಾಳ – ಆದಿ

ಶಿವಕಾಮಿ ಸುಂದರಿ
ಶಿವಲಾಸ್ಯ ವೈಖರಿ
ಶಿವನೊಡನೆ ಸ್ಪರ್ಧಿಸಿ
ಶಿವೆ ನೀನು ಸೋತೆಯಾ

ಶಿವ ಯೋಗಿಗಳನು ಉದ್ಧರಿಸಲು ಪರ-
ಶಿವನೈತರೆ ಶಿವ ಚಿದಂಬರ ಕ್ಷೇತ್ರಕೆ
ಶಿವಮಂಗಳೆ ನೀ ತಡೆದುದದೇತಕೆ
ಶಿವನಿಗೆ ವಿನೋದ ತೋರದಿರ್ಪುದೆ

ಶಿವನೊಡ್ಡಿದ ಪಣತೊಟ್ಟು ನರ್ತಿಸಿದೆ
ಶಿವನೊಳು ಸರಿಸಮದಭಿನಯ ತೋರಿದೆ
ಶಿವ ನಿನ್ನನು ಗೆಲ್ಲಲು ಬಳಿಗಾಣದೆ
ಶಿವಶಿವ ರೂಢಿಯ ಬಿಟ್ಟು ನಡೆದನೆ

ಶಿವ ಬಲಗಾಲನು ತಲೆಗೆ ತಾಗಿಸಲು
ಶಿವೆ ತಲೆಬಾಗಿಸಿ ಕರವ ಜೋಡಿಸಿದೆ
ಶಿವ ಸಾಧ್ವೀಮಣಿ ಮಾನಸಿಥಿಯೆ ಪರ-
ಶಿವನ ನಡೆಗೆ ನೀನರ್ಥವ ತಿಳಿಸಿದೆ

ಶಿವ ನಿನ್ನನು ಹೊರದೂಡಿದನೆಂಬರು
ಶಿವೆ ನೀನಿಳೆಯನ್ನಾಕ್ರಮಿಸಿರುವೆ
ಶಿವನರ್ಧಾಂಗಿಯೆ ಶಕ್ತಿ ಸ್ವರೂಪಿಣಿ
ಶಿವ ಮಂಗಳೆ ಶ್ರೀಗೋಪ ಸಹೋದರಿ

ಉಡುಪಿ ಕೃಷ್ಣ

ರಾಗ – ಕಲ್ಯಾಣಿ
ತಾಳ – ಝಂಪೆ

ಕಂಡೆ ನಾನುಡುಪಿ ಶ್ರೀಕೃಷ್ಣನ
— ಗೋಪಾಲಕೃಷ್ಣನ

ಪುಂಡರೀಕಾಕ್ಷ ಪ್ರ -
ಚಂಡ ಬಾಲಕನು -
ದ್ದಂಡನಾಯಕ ಬ್ರ -
ಹ್ಮಾಂಡ ವ್ಯಾಪಕನ

ಪರಮ ಪಾವನ ಪುರುಷನ
— ಗೀತಾಚಾರ್ಯನ

ಗುರು ಮಧ್ವರಾಯರು
ಸ್ಮರಿಸಿ ಸಂಪಾದಿಸಿದ
ಹರಿ ಸರ್ವೋತ್ತಮನ
ವರದ ಗೋಪಾಲನ

ಕಡೆಗೋಲ ಪಿಡಿದಾತನ
— ಕಡುಚೆಲ್ವರಾಯನ

ಕಡಲಿಂದಲೈತಂದು
ಉಡುಪಿ ಕ್ಷೇತ್ರದಿ ನಿಂದು
ಪೊಡವಿ ಪಾಲಿಸುತಿರುವ
ಕೊಡುಗೈಯ ಕೃಷ್ಣನ

ಕೋದಂಡಪಾಣಿ

ರಾಗ – ಆನಂದಭೈರವಿ
ತಾಳ – ಝಂಪೆ

ಕೋದಂಡಪಾಣಿ ಶ್ರೀರಾಮನೆಡಬಲದಲ್ಲಿ
ವೈದೇಹಿ ಸೌಮಿತ್ರಿ ನಿಂತಿಹುದ ನೋಡ
ಪಾದದಡಿಯಲಿ ಹನುಮ ಪೂಜೆ ಸಲಿಪುದ ನೋಡ
ಈ ದರುಶನವೆ ಸಾಕು ಬೇರೇನು ಬೇಕು

ಏಕಪತ್ನೀವ್ರತನು ಧೀರನದ್ವಯ ದಾನಿ
ಏಕ ವಾಕ್ಯನು ತೊಡುವುದೊಂದೆ ಬಾಣ
ಏಕವಾರವೆ ನಿನಗೆ ಶರಣೆಂದರಿಗೆ ಭಯದ
ಸೋಕುಂಟೆ ಎಲ್ಲಬಗೆ ಪೊರೆವ ಶ್ರೀರಾಮ

ಈ ಜಗತ್ಪಾವನೆ ದಯಾಘನೆ ಪತಿಪ್ರಾಣೆ
ಭೂಜಾತೆ ಲೋಕಹಿತನಿರತೆ ಶುಭಚರಿತೆ
ಸೌಜನ್ಯರೂಪಿಣಿಯು ಮೃದುವಾಣಿ ಕಲ್ಯಾಣಿ
ಪೂಜೆಗೊಳಲೇಂ ಕೊರತೆ ಸೀತೆ ಗುಣಭರಿತೆ

ಮೂರ್ತಿಮತ್ತಾದಂತೆ ಭ್ರಾತೃವಾತ್ಸಲ್ಯವೇ
ಕರ್ತವ್ಯನಿಷ್ಠೆಯಲಿ ತನುವ ಮರೆತು
ಕೀರ್ತಿಯನು ಪಡೆದ ಲಕ್ಷ್ಮಣದೇವನನು ನೋಡು
ಪ್ರಾರ್ಥಿಸುವುದಿನ್ನುಂಟೆ ಬೇರೆ ಗುಣವು

ದಾಸಾನುದಾಸನೀ ದಿವ್ಯ ಶುಭ ಗುಣದ
ರಾಶಿಗಳಿಗೆಂಬವೊಲು ತನ್ನ ಮುಖಭಂಗಿ
ಈ ಶುಭಂಕರನಿಹನು ತಲೆಬಾಗಿ ಪಾದದೆಡೆ
ಲೇಸುಲೇಸೆಂಬಂತೆ ಧೀರ ಹನುಮ

ಏನೆನ್ನ ಸೌಭಾಗ್ಯ ಕಾವೇರಿತೀರದೊಳು
ನಾನಿಂದು ನೋಡುತಿಹೆನದ್ಭುತದ ಸತ್ಯ
ಜಾನಕೀರಾಮ ಲಕ್ಷ್ಮಣ ಹನುಮರೀದೃಶ್ಯ
ಧ್ಯಾನವೀಧಿಯೊಳಿರಲಿ ಗೋಪನಿಗೆ ನಿತ್ಯ

ಕೂಡಲ ಸಂಗಮದೇವ

ರಾಗ– ನಾದನಾಮಕ್ರಿಯ
ತಾಳ– ತಿಶ್ರ ಏಕ

ಕೂಡಲ ಸಂಗಮದೇವ, ನಮ್ಮ
ನಾಡಿನ ಶರಣರ ಭಕ್ತಿ ಪ್ರಭಾವ

ಕಂಡನು ಗೋಪನು ನಿನ್ನನಂದು, ಧನ್ಯತೆ
ಗೊಂಡನು ಶರಣರ ಜೊತೆಯಲಿ ನಿಂದು

ಶಿವಶರಣರ ಗುರು ಬಸವಣ್ಣ, ನಿನ್ನನು
ಸವಿವಚನಗಳಲಿ ಹಾಡಿದನಣ್ಣ

ಶರಣರ ವಚನಾಮೃತಸಾರ, ನಿನ್ನಯ
ವರಪ್ರಸಾದದ ಮತಿ ಸಂಸ್ಕಾರ

ವೇದಾಂತ ತತ್ವ ಸುವಿಚಾರ, ವಚನದೊ-
ಳಾದುದು ಸುಲಭವು ನಿನ್ನುಪಕಾರ

ಅನುಭವ ಮಂಟಪ ಸಾಹಿತ್ಯ, ಶರಣರ
ಅನುಭಾವಿಕ ಕಾವ್ಯಂಗಮ ಸತ್ಯ

ಜಂಗಮ ಕೋಟಿಯ ಮಾಲಿಂಗ, ಶರಣರ
ಮಂಗಳ ಮೂರುತಿ ಜ್ಯೋತಿರ್ಲಿಂಗ

ಶಿವ ಶಿವ ಶಿವ ಶಿವ ಸಾಂಬಶಿವ, ಶರಣರ
ಭವ ಭಯ ಹರ ಶಂಕರ ಮಹಾದೇವ

ಗುರೂಜಿ

ರಾಗ – ದೇಶಿ
ತಾಳ – ಛಾಪು

ಗುರೂಜೀ ನಾರಾಯಣ ಗುರೂಜಿ
ಪರಮಶಾಂತಿಯ ಮೂರ್ತಿ ನಿನಗೆ ಇದೆ ಶರಣಾರ್ತಿ

ಕಣ್ವ ತೀರ್ಥದೊಳು ಸತ್ಕುಲದಲ್ಲಿ ಜನಿಸಿದೆ
ಪುಣ್ಯಕ್ಷೇತ್ರದಿ ಗಂಗೆ ಮಡಿಲಲ್ಲಿ ಬೆಳೆದೆ
ಕಣ್ವಯತಿವರನಂತೆ ಜೀವನವ ನಡೆಯಿಸಿದೆ
ಗಣ್ಯ ವ್ಯಕ್ತಿಗಳೊಡನೆ ನಾಡ ಸೇವಿಸಿದೆ

ನ್ಯಾಯ ಶಾಸ್ತ್ರದೊಳುದ್ದಾಮ ಪಂಡಿತನಾದೆ
ನ್ಯಾಯವನು ದೊರಕಿಸಲು ಹಗಲಿರಳು ದುಡಿದೆ
ಧ್ಯೇಯ ಸಾಧಿಸಲು ವೇದಾಧ್ಯಯನ ಕೈಕೊಂಡೆ
ಶ್ರೇಯಗಳಿಸಿದೆ ಶಿಷ್ಯಸಂಪದವ ಪಡೆದೆ

ಗುರು ಶಾರದಾನಂದರಿಂದ ದೀಕ್ಷೆಯಕೊಂಡೆ
ವರ ಗೃಹಸ್ಥಾಶ್ರಮದ ಧರ್ಮಪಾಲಿಸಿದೆ
ಸರುವ ಜನ ಹಿತ ಬಯಸಿ "ಆರ್ಯಧರ್ಮ"ವ ಮೆರೆದೆ
ಅರಿವೆಂಬ ಹೊಳೆಯನ್ನು ಹರಿಸಿದೆಯೊ ಧರೆಗೆ

ನಾರದನೆ ಬಂದಂತೆ ನೀನಂದು ನಡೆತಂದೆ
ನಾರಸಿಂಹ ಮಂತ್ರ ಉಪದೇಶ ಗೈದೆ
ಬಾರಿಬಾರಿಗು ತಿದ್ದಿ ಕರೆದೊಯ್ದೆಯೋ ಮುಂದೆ
ಕಾರುಣ್ಯಸಿಂಧು ಶ್ರೀಗೋಪನೆಡೆಗಂದು

ಪ್ರಾರ್ಥನೆ

ರಾಗ– ಧನ್ಯಾಸಿ
ತಾಳ– ಝಂಪೆ

ಪೊರೆಯುವುದು ಪಾಮರನ ಪರಮಪುರುಷ
ತರಳನಪರಾಧಗಳ ಮನ್ನಿಸುತ ನಿರುತ

ಎಳೆಹಕ್ಕಿ ತನ್ನಗರಿ ಬಲಿವುದಕೆ ತೊಡಗಲದು
ಬಲವು ಬಂದಿತು ಮೇಲಕಿನ್ನುಹಾರಿ
ಇಳೆಯೊಳೆಲ್ಲೆಲ್ಲಿಯೂ ಸಂಚರಿಸತೊಡಗುವೆನು
ಫಲಗಳನು ತರುವೆನು ತಿಂದು ತೇಗುವೆನು
    ಎಂದು ತನ್ನಯ ಗೂಡನುಳಿದು ತಾಯಿಯನಗಲಿ
    ಮುಂದುಮುಂದಕೆ ಪಾರಿಪೋಗಿ ಬಳಲಿ
    ಅಂದಿನಾಹಾರವಿರದಿರೆ ಕುಂದಿದಾನನದಿ
    ಬಂದ ಕಂದನ ತಾಯಿ ಸಂತೈಸುವಂತೆ

ಎರಡು ಮಾತನು ಕಲಿತು ಪಂಡಿತನು ನಾನೆಂದು
ಎರಡು ರಾಗವನರಿತು ಗಾಯಕನು ಎಂದು
ಎರಡು ಕೆಲಸವ ಮಾಡಿ ಲೋಕತಾರಕನೆಂದು
ಎರಡಕ್ಷರವ ಬರೆದು ಕವಿವರ್ಯನೆಂದು
    ಇನ್ನು ಎನಗೆದುರಾರು ಎಂದೆನುತ ಹೆಮ್ಮೆಯಲಿ
    ಸನ್ನುತ ಪ್ರೇಮಮಯ ನಿನ್ನ ಮರೆತು
    ಮುನ್ನ ಮೆರೆದುದಕಾಗಿ ನೊಂದೆನೈ ಗೋಪಯ್ಯ
    ಮನ್ನಿಸುತಲೆನಗೆ ಮುಂದಿನದಾರಿ ತೋರಿ

ಮಂಗಳಂ

ರಾಗ – ಶ್ರೀರಾಗ
ತಾಳ – ಝಂಪೆ

ಜಯ ಮಂಗಳಂ ನಿತ್ಯ ಶುಭ ಮಂಗಳಂ

ಮಂಗಳಂ ಮನದ ಕಲ್ಮಷವ ಹೊರದೂಡುವಗೆ
ಮಂಗಳಂ ಬುದ್ಧಿ ಪ್ರಚೋದಕನಿಗೆ
ಮಂಗಳಂ ಆತ್ಮಸಂಸ್ಕಾರಗೊಳಿಪಾತನಿಗೆ
ಮಂಗಳಂ ಯೋಗೀಶ ಸದ್ಗುರುವಿಗೆ

ಮಂಗಳಂ ಹಿರಿಯರಿಗೆ ಸಕಲ ಸಜ್ಜನರಿಗೆ
ಮಂಗಳಂ ವಿಬುಧರಿಗೆ ವಿಜ್ಞಾನಿಗೆ
ಮಂಗಳಂ ಲೋಕಕಲ್ಯಾಣ ಚರಿತಾರ್ಹರಿಗೆ
ಮಂಗಳಂ ತ್ಯಾಗಿ ವೈರಾಗಿಗಳಿಗೆ

ಮಂಗಳಂ ಪ್ರಣವಸ್ವರೂಪಿಣಿಗೆ ಶಕ್ತಿಗೆ
ಮಂಗಳಂ ವಾಗ್ದೇವಿ, ಗಾಯತ್ರಿಗೆ
ಮಂಗಳಂ ಗೋಪಲೀಲಾವೇಷ ಪಾವನಗೆ
ಮಂಗಳಂ ಶ್ರೀಸಚ್ಚಿದಾನಂದಗೆ

ಮಂಗಳಂ ಜಯಮಂಗಳಂ

ಗೀತಗಳು - ಅಕಾರಾದಿ

ಮೊದಲಸಾಲು- ಅಕಾರಾದಿ

ಪುಟ

ಪುಟ

ಶ್ರೀ ಗೋ. ಕೃ. ಅವರ ಇತರ ಕೃತಿಗಳು

೧. ಉಡುಗೊರೆ (ಸಣ್ಣ ಕತೆಗಳ ಸಂಕಲನ)
೨. ಬಂಗಾರದ ಡಾಬು ,,
೩. ನಟಿ ,,
೪. ಆಯ್ದ ಹತ್ತು ಕತೆಗಳು ,,
೫. ಅಪರಾಧಿ (ನಾಟಕ)
೬. ಕನ್ಯಾರ್ಥಿ ,,
೭. ಸಾಕಂಕೊಸು ,,
೮. ಚಿರಸಮಸ್ಯೆ ,,
೯. ಕವಿ ಕುಟೀರ ,,
೧೦. ರುಗ್ಣ ಶಯ್ಯೆ ,,
೧೧. ಪಾರ್ಕಿನ ಲಚುಮಿ ,,
೧೨. ಆಸೆ-ನಿರಾಸೆ ,,
೧೩. ಕೆನ್ಸಿಂಗ್‌ಟನ್ ಪಾರ್ಕ್
(ಕವಿತೆ, ಕತೆ, ನಾಟಕ ಪ್ರಬಂಧಗಳ ರಸಾಯನ)
೧೪. ಆಧುನಿಕ ಗದ್ಯ ಸಾಹಿತ್ಯ
(ಗದ್ಯಸಾಹಿತ್ಯದ ಬೆಳವಣಿಗೆಯನ್ನು ಕುರಿತ ದೀರ್ಘ ಮುನ್ನುಡಿಯೊಡನೆ, ಇತರರ ಪ್ರಬಂಧಗಳ ಸಂಗ್ರಹ)
೧೫. Dr. Susila Sanketh
(Short story translated into English by Sri N. S. Ramachandriah, M.A.)
೧೬. Sisters
(Play translated into English by Sri T. V. Aswath, M.A.)

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕ. ಸಾ. ಪ., ಚಾಮರಾಜಪೇಟೆ, ಬೆಂಗಳೂರು-2



ಈ ಪುರಾತನ ವೃಕ್ಷ ಪ್ರಾರ್ಥನಾ ಸ್ಥಳವಂತೆ